

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 05 | Thursday 05-09-2024 | E-mail : maruti.b.hosamani76@gmail.com | Page: 4 | Price : Rs. 1/-

## ಅರಿವಿಗೆ ಸಿರಿ ತಂದ ಗುರುವಿಗೆ ಸಾವಿರದ ಶರಣು




ತಾಯಿಯೇ ಮೊದಲ ಗುರು
ಮನೆಯೇ ಪಾಠ ಶಾಲೆ
ಅಕ್ಷರ ಜ್ಞಾನದ ಬೆಳಕು
ಅಜ್ಞಾನದಿಂದ ಸುಜ್ಞಾನದಡೆ
ಭಯ ನಿವಾರಿಸಿ ನಿರ್ಭಯ
ತಮದಿಂದ ಬೆಳಕಿನೆಡೆಗೆ
ಜೀವನಕ್ಕೊಂದು ಮೆರುಗು
ಗುರು ಕರುಣೆ ವರಪ್ರದಾಯ
ಶಿಕ್ಷಕರ ದಿನ ಶುಭದಿನ
ಅಮೃತ ಘಳಿಗೆ ಸರ್ವ ಗುರು
ಸದಾ ನೆನಹು ನಮ್ಮ ಹೆಮ್ಮೆ
ಸರ್ವ ಗುರು ಜ್ಞಾನ ಗಣಿ
ಶ್ರೀ ಗುರುವಿಗೆ ಶಿರಬಾಗಿ ನಮಿಪೆವು
ಸಾವಿರದ ಶರಣು ಗುರುಭ್ಯೋ ನಮಃ
ಸದಾ ಹರುಷ ತರಲಿ ಗುರು
ವಿಶ್ವದಲಿ ಶಿಕ್ಷಕರ ದಿನ ಶುಭಕರ

–ದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
"ವಿಶ್ವ ಆರೋಗ್ಯ ಸಂಜೀವಿನಿ"
ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು
ಬಾಗಲಕೋಟೆ

# ನಮ್ಮ ಆಹಾರದಲ್ಲಿ ರುಚಿಯ ಮತ್ತು 6 ರಸಗಳ ಮಹತ್ವ

ಆಯುರ್ವೇದದಲ್ಲಿ ಆಚಾರ್ಯರು ರುಚಿಗೆ ಬಹಳ ಪ್ರಾಶಸ್ತ್ಯವನ್ನು ನೀಡಿದ್ದಾರೆ. ನಾವು ತಿನ್ನುವ ಆಹಾರವು ಪ್ರತಿ ದಿನವು ಬೇರೆ ಬೇರೆಯಾಗಿ ರುಚಿಯಾಗಿರುತ್ತದೆ. ಹಾಗಾದರೆ ಈ ಆಹಾರ ಏನರಿಂದ ಮಾಡಲ್ಪಟ್ಟಿದೆ ಮತ್ತು ಅದರ ಲಾಭಗಳನ್ನು ತಿಳಿಯೋಣ

ಮುಖ್ಯವಾಗಿ ಅವರ ಪ್ರಕಾರ 6 ರಸಗಳೆಂದು ಪರಿಗಣಿಸಿದ್ದಾರೆ ಮತ್ತು ಇವುಗಳನ್ನು ಆಹಾರದ ರೂಪದಲ್ಲು ಸೇವಿಸಬಹುದು. ಇದು ತುಂಬಾ ಮಹತ್ವವನ್ನು ಹೊಂದಿದ್ದು, ಎಲ್ಲಾ 6 ರಸಗಳು ಕೂಡ ಅದರದೇ ಆದ ಮಹತ್ವ ಮತ್ತು ಗುಣವೈಖರಿಗಳನ್ನು ಹೊಂದಿವೆ.

ಈ ರಸಗಳು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ

ನಮ್ಮ ದೇಹದ ಮೇಲೆ ಹೇಗೆ ಪರಿಣಾಮ ಬೀರುತ್ತವೆ

ಇದರ ಅರ್ಥ ಏನೆಂದರೆ, ಜಗತ್ತಿನಲ್ಲಿರುವ ಎಲಾ ದ್ರವ್ಯಗಳು ಪಾಂಚಭೌತಿಕ ತತ್ವಗಳಿಂದ ಮಾಡಲ್ಪಡಲಾಗಿದೆ ಎಂದು.

ಹಾಗೆಯೆ ಎಲ್ಲಾ ರಸಗಳು ಕೂಡ ಪಾಂಚಭೌತಿಕ ತತ್ವಗಳಿಂದ ಮಾಡಲ್ಪಡಲಾಗಿದೆ ಮತ್ತು ಅದರಲ್ಲಿ ಎರಡು ಮಹಾಭೂತಗಳು ಪ್ರಧಾನವಾಗಿರುತ್ತವೆ

ಮಧುರ ರಸ – ಪೃಥ್ವಿ ಮತ್ತು ಜಲ ಮಹಾಭೂತ
ಆಮ್ಲ ರಸ – ಪೃಥ್ವಿ ಮತ್ತು ಅಗ್ನಿ ಮಹಾಭೂತ
ಲವಣ ರಸ – ಜಲ ಮತ್ತು ಅಗ್ನಿ ಮಹಾಭೂತ
ಕಟು ರಸ – ಅಗ್ನಿ ಮತ್ತು ವಾಯು ಮಹಾಭೂತ
ತಿಕ್ತ ರಸ – ವಾಯು ಮತ್ತು ಆಕಾಶ ಮಹಾಭೂತ
ಕಷಾಯ ರಸ – ವಾಯು ಮತ್ತು ಪೃಥ್ವಿ ಮಹಾಭೂತ

ಇವುಗಳ ಗುಣಗಳು
ಮಧುರ ರಸ – ತೇವ, ಶೀತ, ಗುರು
ಆಮ್ಲ ರಸ – ತೇವ, ಶೀತ, ಗುರು
ಲವಣ ರಸ – ತೇವ, ಉಷ್ಣ, ಹಗುರ
ಕಟು ರಸ – ತೇವ, ಉಷ್ಣ, ಹಗುರ
ತಿಕ್ತ ರಸ – ಒಣ, ಉಷ್ಣ, ಹಗುರ
ಕಷಾಯ ರಸ – ಒಣ, ಉಷ್ಣ, ಹಗುರ

ಈ 6 ರಸಗಳ ಸರಿಯಾದ ಪ್ರಮಾಣದಲ್ಲಿ ಆಯಾ ರುತಿವಿನ ಅನುಗುಣವಾಗಿ ಸೇವಿಸಿದರೆ, ದೇಹದಲ್ಲಿ ವ್ಯಾಧಿಕ್ಷಮತೆ ಹೆಚ್ಚುವುದು, ಅಂಗಾಂಗಳ ಆರೋಗ್ಯ ಕಾಪಡುವುದು, ಜೀವಕೋಶಗಳ ಧಾರಣೆಯನ್ನು ಮಾಡುವುದು ಮತ್ತು ನಮ್ಮ 5 ಇಂದ್ರಿಯಗಳನ್ನು ಆರೋಗ್ಯವಾಗಿಡುವುದು.

ಆಹಾರಗಳು ದೇಹದ ಅಸಮತೋಲನವನ್ನು ಹೇಗೆ ಮಾಡಬಹುದು?

**ಉದಾಹರಣೆ 1:** ನಿಯಮಿತವಾಗಿ ಸಿಹಿ, ಉಪ್ಪು ಮತ್ತು ಹುಳಿ ಆಹಾರವನ್ನು ಸೇವಿಸಿದರೆ, ಕಫ ದೋಷವು ಹೆಚ್ಚಾಗುತ್ತದೆ ಮತ್ತು ಬೊಜ್ಜು (ಸ್ಥೌಲ್ಯ), ಮಧುಮೇಹ (ಮಧು ಮೇಹ) ಇತ್ಯಾದಿಗಳಿಗೆ ಕಾರಣವಾಗುತ್ತದೆ.

ಸಿಹಿ, ಖಾರ, ಹುಳಿ ರುಚಿಗಳನ್ನು ಹೊಂದಿರುವ ಕಡಿಮೆ ಆಹಾರಗಳನ್ನು ಮತ್ತು ಕಹಿ, ಕಟುವಾದ ಮತ್ತು ಸಂ–ಕೋಚಕ ಆಹಾರವನ್ನು ಸೇವಿಸಿದರೆ ನೀವು ದೇಹದ ತೂಕವನ್ನು ಕಡಿಮೆ ಮಾಡಬಹುದು ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಬಹುದು.

**ಉದಾಹರಣೆ 2:** ನಿಯಮಿತವಾಗಿ ಹುಳಿ, ಉಪ್ಪು, ಕಟುವಾದ ಆಹಾರವನ್ನು ಸೇವಿಸಿದರೆ ಪಿಟ್ಟಾ ದೋಷವು ಹೆಚ್ಚಾಗುತ್ತದೆ ಮತ್ತು ಆಮ್ಲೀಯತೆ, ಬೆಲ್ಚಿಂಗ್ ಮತ್ತು ಸುಡುವ ಸಂವೇದನೆ ಇತ್ಯಾದಿಗಳಿಗೆ ಕಾರಣವಾಗುತ್ತದೆ (ಆಮ್ಲಪಿತ್ತ)

ಹುಳಿ, ಉಪ್ಪು, ಕಟುವಾದ ರುಚಿಗಳನ್ನು ಹೊಂದಿರುವ ಕಡಿಮೆ ಆಹಾರವನ್ನು ಸೇವಿಸಿದರೆ ಮತ್ತು ಸಂಕೋಚಕ, ಕಹಿ ಮತ್ತು ಸಿಹಿಯಾದ ಹೆಚ್ಚಿನ ಆಹಾರವನ್ನು ಸೇವಿಸಿದರೆ ಮೇಲಿನ ರೋಗಲಕ್ಷಣಗಳನ್ನು ನೀವು ನಿಯಂತ್ರಿಸಬಹುದು.



**ಡಾ, ನವೀನ್.ಬಿ.ಸಜ್ಜನ್**
**ಪ್ರೊಫೆಸರ್ ಮತ್ತು ಶಸ್ತ್ರ ಚಿಕಿತ್ಸಾ ತಜ್ಞರು**
**ಚಿತ್ರದುರ್ಗ.**

## ಜ್ಞಾನ ಭಂಡಾರದ ಗಣಿ ಗುರುಗಳು (ಸರ್ವ ಗುರುಬಳಗಕ್ಕೆ ಶಿಕ್ಷಕರ ದಿನಾಚರಣೆಯ ಶುಭಾಶಯಗಳು)

ಅಕ್ಷರ ಕಲಿಸಿ ವಿದ್ಯಾರ್ಥಿಯ ಬದುಕು ತಿದ್ದಿರುವರು
ಸನ್ಮಾರ್ಗ ತೋರಿಸಿ ಸ್ವರ್ಗ ಕರುಣಿಸಿರುವರು
ಜ್ಞಾನದ ತುತ್ತು ಉಣಿಸಿ ಅಜ್ಞಾನ ತೊಲಗಿಸಿರುವರು
ಕೈ ಹಿಡಿದು ನಡೆಸಿ ಮನದ ಭಯ ಓಡಿಸಿದವರು ಶಿಕ್ಷಕರು
ತಾಯಿಯ ಉಸಿರಿಗೆ ತಂದೆಯ ಹೆಸರಿಗೆ ಅರ್ಥ ಕೊಟ್ಟವರು



ಸುಳ್ಳನು ಬದಿಗೊತ್ತಿ ಸತ್ಯದ ಬೆಲೆ ತಿಳಿಸಿಕೊಟ್ಟರು
ನಮಗಿರುವ ಪರೀಕ್ಷಾ ಭಯ ನಿವಾರಿಸಿದರು
ಕಪ್ಪು ಹಲಗೆಯಲಿ ಬದುಕಿನ ಚಿತ್ರ ತೋರಿಸಿದರು
ಲೆಕ್ಕವ ತಿಳಿಸಿ ಲೆಕ್ಕಕ್ಕೆ ಸಿಗದ ಮಟ್ಟಕ್ಕೆ ಬೆಳೆಸಿದರು
ಎರಡನೇ ತಾಯಿಯ ಸ್ವರೂಪ ಗುರು ಪೂಜ್ಯರು

ದೇಶ ಸುತ್ತಿ ಕೋಶ ಓದಿ ಬುದ್ದಿಯ ಹೇಳಿದರು
ವ್ಯಾಯಾಮ ಮಾಡಿಸಿ ದೇಹವನ್ನ ಸದೃಢ ಗೊಳಿಸಿದರು
ಪ್ರಾರ್ಥನೆ ಮಾಡಿಸಿ ಮನಸಿನ ಮಲೀನತೆ ಶುಭ್ರ ಗೊಳಿಸಿದರು
ತಪ್ಪಾದಾಗ ದಂಡಿಸಿ ಯಾರ ಬಳಿ ಕೈ ಚಾಚಾದಂತೆ ತಿದ್ದಿದರು
ಪ್ರತಿ ವಿದ್ಯಾರ್ಥಿಯ ಭವಿಷ್ಯ ಬರೆದ ಮಹಾತ್ಮರು

ಒಮ್ಮೊಮ್ಮೆ ತಂದೆಯಾಗಿ ಜವಾಬ್ದಾರಿಯ ತಿಳಿಸಿದರು
ಒಮ್ಮೊಮ್ಮೆ ತಾಯಿಯಾಗಿ ಕರುಣೆಯ ಹೃದಯ ಆವರಿಸಿದರು
ಒಮ್ಮೊಮ್ಮೆ ಸಂಬಂಧಿಯಾಗಿ ನಮ್ಮೆಲ್ಲಾ ಕಷ್ಟಕ್ಕೆ ಹೆಗಲಾದರು ಒಮ್ಮೊಮ್ಮೆ ಗೆಳೆಯನಾಗಿ ಸದಾ ಜೊತೆಗಿದ್ದು ಬೆಂಬಲಿಸಿದರು ಜ್ಞಾನ ದೇಗುಲದ ಜ್ಞಾನ ಭಂಡಾರದ ಗಣಿಯಾದ ಶ್ರೇಷ್ಠರು

ಶಿಕ್ಷಕರು ಶಿವ ಸ್ವರೂಪಿಯ ತದ್ರೂಪದಂತೆ
ಗುರುಗಳು ಬ್ರಹ್ಮ ವಿಷ್ಣು ಮಹೇಶ್ವರನಂತೆ
ಮಾಜಿ ಎಂಬ ಪದ ಇರದ ಏಕೈಕ ವೃತ್ತಿಯಂತೆ
ಶಾಲೆಯೇ ಕುಟುಂಬವೆಂದು ಬದುಕಿದ ನಿಸ್ವಾರ್ಥಿಯಂತೆ
ಇಡೀ ಮನುಕುಲದ ಜ್ಞಾನಕ್ಕೆ ರೂವಾರಿಯಂತೆ

–ಶ್ರೀ ಮುತ್ತು ಯ ವಡ್ಡರ ಶಿಕ್ಷಕರು
ಬಾಗಲಕೋಟ 9845568484

## ಸುಪ್ರೀಂ ಕೋರ್ಟ್ ಮೊರೆ ಸಾರ್ಥಕ, ಪೈ.ಪಂ ನೂತನ ಕಾಂಗ್ರೇಸ್ ಅಧ್ಯಕ್ಷೆ–ಬದ್ದಿ ರೇಖಾ ರಮೇಶ್





**ಸಿಹಿ–ಕಹಿ ಸುದ್ದಿ**

**ಕೊಟ್ಟೂರು :** 2018 ರಲ್ಲಿ ಕೊಟ್ಟೂರು ಪಟ್ಟಣ ಪಂಚಾಯಿತಿ ಸ್ಥಳೀಯ ಆಡಳಿತ ಅಧಿಕಾರದ ಹಂಚಿಕೆ ಮಾಡಲು ಸರ್ಕಾರ ಅಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮಹಿಳೆ ಉಪಾಧ್ಯಕ್ಷ ಸ್ಥಾನಕ್ಕೆ ಹಿಂದುಳಿದ ವರ್ಗವಾಗಿ ವಿಂಗಡಿಸಿ ಆದೇಶವನ್ನು ಹೊರಡಿಸಲಾಯಿತು ಇದನ್ನು ಪ್ರಶ್ನಿಸಿದ 20 ನೇ. ವಾರ್ಡಿನ ಪಕ್ಷೇತರ ಸದಸ್ಯೆ ಬಿ.ರೇಖಾ ರಮೇಶ್ ರವರು ಸ್ಥಳೀಯ ಆಡಳಿತ ಅಧಿಕಾರ ಹಂಚಿಕೆಯಲ್ಲಿ ತಾರತಮ್ಯ ವಾಗಿರುವುದನ್ನು ಮನಃ ಗೊಂಡು ನಿರಂತರ 20 ವರ್ಷಗಳ ಕಾಲ ಪರಿಶಿಷ್ಟ ಮಹಿಳೆಗೆ ಅವಕಾಶವನ್ನು ನೀಡದೆ ಇರುವುದನ್ನು ವಿರೋಧಿಸಿ ಹೈ ಕೋರ್ಟ್ ಮೆಟ್ಟಿಲು ಏರಲಾಯಿತು. ಇದರ ಸಂಬಂಧ ಕೆಲವು ದಿನಗಳ ಕಾಲ ಹೈಕೋರ್ಟ್ ತಡೆಯಾಜ್ಞೆಯನ್ನು ನೀಡಲಾಯಿತು ನಂತರ ಪ.ಪಂ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಮುಂದುವರೆದ ಹಿನ್ನಲೆಯಲ್ಲಿ ಇತಿಹಾಸದ ಇದೆ ಮೊದಲ ಬಾರಿಗೆ ಈ ವಿಷಯವಾಗಿ ಸುಪ್ರೀಂ ಕೋರ್ಟ್ ಗೆ ಮೊರೆ ಹೋಗಿ ಅಫಿಡೆವಿಟ್ ಸಲ್ಲಿಸಲಾಯಿತು ಸರ್ಕಾರದ ಮೀಸಲಾತಿ ಸುತ್ತೋಲೆಯನ್ನು ಪರಿಶೀಲಿಸಿದ ತ್ರಿ ಸದಸ್ಯ ಪೀಠ ಅಧಿಕಾರದ ಹಂಚಿಕೆಯಲ್ಲಿ ರಾಜಕೀಯ ಪಕ್ಷಗಳ ಹಸ್ತ ಅಭಿಲಾಷೆ ಮಾಡದೇ ಸುತ್ತೋಲೆ ಪ್ರಕಾರ ಕಾನೂನು ಬದ್ಧವಾಗಿ ಮೀಸಲಾತಿಯ ಅಧಿಕಾರ ಹಂಚಿಕೆ ಮಾಡಬೇಕು ಹಾಗೂ ಎರಡನೇ ಅವಧಿಯಲ್ಲಿ ಮೀಸಲಾತಿಯನ್ನು ಕ್ರಮ ಬದ್ದವಾಗಿ ನೀಡಬೇಕು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಇದರ ಕಾನೂನು ಸಮರದ ಪ್ರತಿಫಲವಾಗಿ ಎರಡನೇ ಅವಧಿಗೆ ಪರಿಶಿಷ್ಟ ಮಹಿಳೆಗೆ ಅವಕಾಶ ನೀಡಿರುವುದು ಸಂತಸದ ತಂದಿದೆ. ಎಂದು ನೂತನ ಕಾಂಗ್ರೆಸ್ ಅಧ್ಯಕ್ಷೆ ಬದ್ದಿ ರೇಖಾ ರಮೇಶ್ ರವರು ಸುದ್ದಿಗಾರರೊಂದಿಗೆ ತಿಳಿಸಿದರು.

**ನಮಗೆ ನ್ಯಾಯಾಲಯದಲ್ಲಿ ಸಂಪೂರ್ಣ ವಿಶ್ವಾಸ ಇರುವುದರಿಂದ 2018 ರ ಸ್ಥಳೀಯ ಆಡಳಿತ ಚುನಾವಣೆಯಲ್ಲಿ ಅಧ್ಯಕ್ಷರ ಮೀಸಲಾತಿ ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಲಾಯಿತು ಆದ ಕಾರಣ ಕ್ರಮ ಬದ್ದವಾಗಿ ಸ್ಥಳೀಯ ಚುನಾವಣೆಯಲ್ಲಿ ಮೀಸಲಾತಿಯನ್ನು ನೀಡಬೇಕೆಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ವ್ಯಕ್ತ ಪಡಿಸಲಾಗಿತ್ತು 2020 ರಲ್ಲಿ ಸರ್ಕಾರದ ಸುತ್ತೋಲೆಯನ್ನು ಸುಪ್ರೀಂ ಕೋರ್ಟ್ ಗೆ ಅಪಿಡೆವಿಟ್ ನ್ನು ಸಲ್ಲಿಸಿದ ಪ್ರತಿ ಫಲವೇ ಈ ಬಾರಿ ಪರಿಶಿಷ್ಟ ಜಾತಿ ಮಹಿಳೆ ಬರಲು ಅನುಕೂಲವಾಯಿತು.**

**–ಬದ್ದಿ ಮರಿಸ್ವಾಮಿ**
**ಡಿ.ಎಸ್.ಎಸ್ ಜಿಲ್ಲಾ ಮುಖಂಡ.**

---

**ನನಗೆ ಪಪಂ ಅಧ್ಯಕ್ಷರಾಗಲು ಸಹಕರಿಸಿದ ನೀಡಿದ ಕೆ.ಎಂ.ಎಫ್ ಅಧ್ಯಕ್ಷ ಭೀಮ ನಾಯ್ಕ ರವರಿಗೆ ಮತ್ತು ಎಲ್ಲಾ ವಾರ್ಡಿನ ಸದಸ್ಯರಿಗೆ ಹಾಗೂ ಮುಖಂಡರಿಗೂ ಹೃತ್ಪೂರ್ವಕ ಅಭಿನಂದನೆಗಳು ನಮ್ಮ ಅಧಿಕಾರದ ಅವಧಿಯಲ್ಲಿ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಪಟ್ಟಣದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುವೆ ಎಂದು ಬದ್ದಿ ರೇಖಾ ರಮೇಶ್ ಪ.ಪಂ ಕಾಂಗ್ರೆಸ್ ನೂತನ ಅಧ್ಯಕ್ಷರು.**

ಪಟ್ಟಣದಲ್ಲಿ 20 ವಾರ್ಡ್ ಗಳ ಪೈಕಿ 09 ಕಾಂಗ್ರೆಸ್ 08 ಬಿಜೆಪಿ 3 ಪಕ್ಷೇತರ ಅಭ್ಯರ್ಥಿಗಳು ಇದ್ದು ಇದರಲ್ಲಿ ಕಾಂಗ್ರೆಸ್ ನಾ 02 ಅಭ್ಯರ್ಥಿಗಳು ಮತ್ತು ಪಕ್ಷೇತರ 01 ಅಭ್ಯರ್ಥಿ ಬೇರೆ ಪಕ್ಷದಲ್ಲಿ ಗುರುತಿಸಿ ಕೊಂಡಿದ್ದು ಬಿಜೆಪಿ ಅಧಿಕಾರ ಗದ್ದುಗೆ ಹಿಡಿಯಲು ಸುಲಭವಾಗಿತ್ತು ಸತತವಾಗಿ 20 ವರ್ಷಗಳಿಂದ ಎಂ.ಎಂ.ಜೆ ಹರ್ಷವರ್ಧನ್ ರವರು ಪಟ್ಟಣ ಪಂಚಾಯಿತಿ ಅಧಿಕಾರವನ್ನು ತನ್ನ ಹಿಡಿತದಲ್ಲಿ ಹಿಡಿದಿಟ್ಟು ಕೊಂಡು ಬಂದಿರುವ ಗಮನಿಸಿದ ಸ್ಥಳೀಯ ನಾಯಕರು ಇದನ್ನು ಛಿದ್ರ ಗೊಳ್ಳಿಸಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಪ್ರಮುಖಪಾತ್ರ ವಹಿಸಿದರು ಎಂಬ ವದಂತಿಗಳು ಹರದಾಡುತ್ತಿವೆ. ಅದು ಏನೇ ಇರಲಿ ಎಂ.ಎಂ.ಜೆ ಹರ್ಷವರ್ಧನ್ ರವರು ಎರಡನೇ ಅವಧಿಗೆ ಅಧಿಕಾರ ಚುಕ್ಕಾಣಿ ತೆಗೆದು ಕೊಳ್ಳುವಲ್ಲಿ ಹಿಂದೇಟು ಹಾಕಿರುವುದಕ್ಕೆ ಕೆಲವು ಅನುಮಾನಗಳಿಗೆ ದಾರಿ ಮಾಡಿ ಕೊಟ್ಟಂತಾಗಿದೆ ಹಲವರು ಸಾರ್ವಜನಿಕರ ವಲಯಗಳಲ್ಲಿ ಇವರ ರಾಜಕೀಯ ಶಕ್ತಿ ಮತ್ತು ಆಸಕ್ತಿ ಕಡಿಮೆ ಆಗಿದೆ ಎಂಬ ಪಿಸು ಮಾತುಗಳು ಕೇಳಿ ಬರುತ್ತಿವೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ಜೀವನದ ಸಾರ್ಥಕತೆ, ಬಸವಾದಿ ಶರಣರ ವಚನಗಳಲ್ಲಿ ಅಡಗಿದೆ: ಅಮರಯ್ಯ ಸ್ವಾಮಿ

**ತಾಳಿಕೋಟಿ :** ಲೋಕದ ಮೋಹದ ಹಿಂದೆ ಬಿದ್ದು ಬದುಕಿನ ಉದ್ದೇಶವನ್ನೇ ನಾವಿಂದು ಮರೆತಿದ್ದೇವೆ. ಎಲ್ಲವೂ ಒಂದು ದಿನ ನಶಿಸಿ ಹೋಗಲಿದೆ. ನಾವು ಸಂಪಾದಿಸಿದ ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೋಗಬೇಕು ಆದ್ದ–ರಿಂದ ಬದುಕು ಕೇವಲ ಆಸ್ತಿಗಾಗಿಯೇ ಇರದೆ ಅಸ್ತಿತ್ವಕ್ಕಾಗಿರಬೇಕು ಎಂದು ಬಸವಾದಿ ಶರಣರು ತಿಳಿಸಿದ್ದಾರೆ ಎಂದು ಸಾಹಿತಿ ಅಮರಯ್ಯಸ್ವಾಮಿ ಜಾಲಿಬೆಂಚಿ ಹೇಳಿದರು. ಪಟ್ಟಣದ ಶ್ರೀ ಕಾಳಿಕಾದೇವಿ ಮಂದಿರದಲ್ಲಿ ಸೋಮವಾರ ಸಂಜೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕ ಘಟಕ, ಯುವ ಘಟಕ ಹಾಗೂ ಕದಳಿ ವೇದಿಕೆ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ಯ ಹಮ್ಮಿಕೊಂಡ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶರಣರು ಭಕ್ತಿ ವೈರಾಗ್ಯಕಿಂತಲೂ ಜ್ಞಾನಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ತನ್ನನ್ನು ತಾನು ಅರಿಯುವುದೇ ನಿಜವಾದ ಜ್ಞಾನವಾಗಿದೆ.ಸಾವಿರ ವಚನ ಓದುವುದಕ್ಕಿಂತಲೂ ಒಂದು ವಚನ ಅರ್ಥೈಸಿಕೊಂಡು ಬದುಕುವ ಅಗತ್ಯ ಇದೆ ಎಂದ ಅವರು ಶರಣರ ತತ್ವಾದರ್ಶ ಹಾಗೂ ಅವರ ವಚನಗಳ ಸಾರವನ್ನು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯ




ಎಲ್ಲರೂ ಸೇರಿ ಮಾಡಬೇಕಾಗಿದೆ ಎಂದರು. ಪರಿಷತ್ತಿನ ತಾಲೂಕಾ ಘಟಕದ ಅಧ್ಯಕ್ಷ ಸಾಹಿತಿ ಅಶೋಕ ಹಂಚಲಿ ಅಧ್ಯಕ್ಷತೆ ವಹಿಸಿ ಮಾತನಾಡಿ ವಚನ ಸಾಹಿತ್ಯ ಎಚ್ಚರಿಸುವ ಸಾಹಿತ್ಯವಾಗಿದೆ. ವಚನ ಸಾಹಿತ್ಯದಲ್ಲಿ ಕೆಲವು ವಿಚಾರಗಳನ್ನು ಉಗ್ರವಾಗಿ ಖಂಡಿಸಲಾಗಿದೆ ಆದರೆ ಪ್ರತಿಶತ 95 ರಷ್ಟು ವಚನಗಳು ಮನಸ್ಸಿಗೆ ಸಂತೋಷವನ್ನು ನೀಡುವಂತಹವು ಆಗಿವೆ. ವೈಚಾರಿಕತೆ ಹೆಸರಿನಲ್ಲಿ ಮನಸ್ಸುಗಳನ್ನು ಕೆರಳಿಸುವ ಕಾರ್ಯವಾಗಬಾರದು ವೈಚಾರಿಕ ಚಿಂತನೆಗಳು ಆರೋಗ್ಯಪೂರ್ಣವಾಗಿರಬೇಕು. ಭೌತಿಕತೆಯ ವ್ಯಾಮೋಹದಿಂದಾಗಿ ಬದುಕಿನ ಉದ್ದೇಶವನ್ನು ಮರೆಯುತ್ತಿದ್ದೇವೆ ಈ ಜೀವನ ಕ್ಷಣಿಕ ಯಾವಾಗ ಮುಗಿದು ಹೋಗುತ್ತದೆ ಎಂಬುದು ಗೊತ್ತಿಲ್ಲ ಆದರೆ ಭೂಮಿ ಮೇಲೆ ಇರುವಷ್ಟು ದಿನ ಶರಣ–ರು ತೋರಿದ ಮಾರ್ಗದಲ್ಲಿ ನಡೆದು ಜೀವನ ಸಾರ್ಥಕ ಮಾಡಿಕೊಳ್ಳೋಣ ಎಂದರು. ಇದೇ ಸಂದರ್ಭದಲ್ಲಿ ಎಸ್ ಕೆ ಪದವಿ ಪೂರ್ವ ಕಾಲೇಜ್ ಪ್ರೌಢಶಾಲಾ ವಿಭಾಗದ ಹಿಂದಿ ವಿಷಯ ಶಿಕ್ಷಕ ಅನಿಲಕುಮಾರ ಬಿ. ಇರಾಜ ಅವರಿಗೆ ಪಿ.ಎಚ್.ಡಿ.

ಪದವಿ ಪ್ರದಾನ ಮಾಡಿದ ಹಿನ್ನೆಲೆಯಲ್ಲಿ ವೇದಿಕೆಯಿಂದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕದಳಿ ವೇದಿಕೆ ಅಧ್ಯಕ್ಷೆ ಶ್ರೀಮತಿ ಉಮಾ.ಜಿ.ಘೀವಾರಿ. ಯುವ ಘಟಕದ ಅಧ್ಯಕ್ಷ ಜಗದೀಶ ಬಿಳೇಭಾವಿ. ಮುಖ್ಯ ಶಿಕ್ಷಕರಾದ ಶರಣಬಸವ ಗಡೇದ.ಎಸ್.ಎಸ್.ಬಾಕಲಿ. ವರ್ತಕ ಮಹಾದೇವಪ್ಪ ಕುಂಬಾರ. ಗೌರವ ಕಾರ್ಯದರ್ಶಿ ಗಂಗಾಧರ ಕಸ್ತೂರಿ. ಪತ್ರಕರ್ತ ಮಲ್ಲಿಕಾರ್ಜುನ ಹುಣಸಗಿ.ಜಿ.ಎಸ್.ಜಮ್ಮಲದಿನ್ನಿ.ಕಾಶಿನಾಥ ಮುರಾಳ.ಸಾಹೇಬಗೌಡ ಬಿರಾದಾರ. ಶಿವಲಿಂಗಪ್ಪ ಪಾಲ್ಕಿ. ಸಿದ್ದು ಕರಡಿ. ಪ್ರಭು ಸಣ್ಣಕ್ಕಿ. ಗುಂಡುರಾವ ಧನಪಾಲ. ಅಶೋಕ ಚಿನಗುಡಿ. ಮಲ್ಲನಗೌಡ ಪಾಟೀಲ.ವಾಲೀಕಾರ ಸರ್. ಶ್ರೀಮತಿ ಸುರೇಖಾ ಸಾಲಂಕಿ. ಸುಜಾತ ಪಾಟೀಲ. ಜಯಶ್ರೀ ಸಜ್ಜನ. ಶಿವಲೀಲಾ ಮುರಾಳ. ಶಿಲ್ಪ ಸುಳೇಭಾವಿ. ಪ್ರಭಾವತಿ ಕತ್ತಿ. ಮೇಘಾ ಡಿ.ಬಿ. ಶ್ರೀಮತಿ ಎಸ್.ಎಚ್. ಪಾಟೀಲ.ಸಂಗೀತ ಬಳಗಾನೂರ. ನಿರ್ಮಲ ಕತ್ತಿ.

ರಾಜೇಶ್ವರಿ ಸಜ್ಜನ. ಅಕ್ಕಮಹಾದೇವಿ ಪಾಟೀಲ ಹಾಗೂ ಪರಿಷತ್ತಿನ ಪದಾಧಿಕಾರಿಗಳು ಇದ್ದರು. ಸಿದ್ದುಕರಡಿ ಸ್ವಾಗತಿಸಿದರು. ಶ್ರೀಮತಿ ಶಿವಲೀಲಾ ಮುರಾಳ ಪ್ರಾರ್ಥಿಸಿದರು. ಸಂಗಮೇಶ ಪಾಲ್ಕಿ ನಿರೂಪಿಸಿದರು. ಸಾಹಿಲ್ ಮುರಾಳ ವಂದಿಸಿದರು.

## ಬಿಜೆಪಿ ಸದಸ್ಯತ್ವ ಅಭಿಯಾನ ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ




**ಲಿಂಗಸಗೂರು :** ಪಟ್ಟಣದಲ್ಲಿ ಮಾರವಾಡಿ ಸಮಾಜದ. ಮಂಟಪದಲ್ಲಿ ಆಯೋಜಿಸಿದ ಬಿಜೆಪಿ ಸದಸ್ಯತ್ವ ಅಭಿಯಾನ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಶಾಸಕ ಮಾನಪ್ಪ ಡಿ ವಜ್ಜಲ್ ಉದ್ಘಾಟಿಸಿ ಮಾತನಾಡಿ ಸದಸ್ಯತ್ವ ನೊಂದಣ ಬೂತ ಮಟ್ಟದಲ್ಲಿ ಹೆಚ್ಚು ನೋಂದಾಯಿಸಿ ಪ್ರಥಮ ಬಂದವರಿಗೆ.ಚಿನ್ನ ಹಾಗೂ ದ್ವೀತಿಯ ಬೆಳ್ಳಿ ಕಡಗ ಕಾಣಿಕೆ ನೀಡುವದಾಗಿ ಹೇಳಿದರು.

ಲಿಂಗಸುಗೂರ ರಾಯಚೂರ ಜಿಲ್ಲೆಗೆ ಸದಸ್ಯತ್ವ ನೊಂದಣಿಯಲ್ಲಿ ಪ್ರಥಮ ಸ್ಥಾನಕ್ಕೆ ಬರಬೇಕು ಎಂದು ಶಾಸಕ ವಜ್ಜಲ್ ಹೇಳಿದರು.ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವು ದಿವಾಳಿಯಾಗಿದ್ದು ಯಾವ ಶಾಸಕರಿಗೂ ಅನುದಾನವನ್ನು ನೀಡುತ್ತಿಲ್ಲ ಕ್ಷೇತ್ರದ 40 ಗ್ರಾಮಗಳು ನೀರಾವರಿಯಿಂದ ವಂಚಿತವಾಗಿದ್ದು ಯಾವ ಶಾಸಕರಿಗೂ ಅನುದಾನವನ್ನು ನೀಡುತ್ತಿಲ್ಲ ಗ್ರಾಮಗಳು ನೀರಾವರಿಯಿಂದವಂಚಿತವಾಗಿದ್ದುಅವುಗಳಿಗೆನೀರು ದೊರೆಯದಿದ್ದರೆ ಹೋರಾಟಕ್ಕೂ ಸಿದ್ಧವಿರುವುದಾಗಿ ಹೇಳಿದರು ನೂತನ ಪಧಾದಿಕಾರಿಗಳ ಪದಗ್ರಹಣ ಕಾರ್ಯ ನಡೆಯಿತು ಈ ಸಂದರ್ಭದಲ್ಲಿ.ಮಂಡಲ ಅಧ್ಯಕ್ಷ ಅಯ್ಯಪ್ಪ ಮಾಳೂರ. ಶರಣಪ್ಪ ಮೇಟು .ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀರನಗೌಡ ಲೆಕ್ಕಿಹಾಳ. ಗಿರಿಮಲ್ಲನಗೌಡ.ನಾಗಭೂಷಣ. ಜಗನ್ನಾಥ ಕುಲಕರ್ಣಿ. ಹುಲ್ಲೇಶಪ್ಪ ಸಾಹುಕಾರ. ಪರಮೇಶ್ ಯಾದವ. ವೆಂಕನಗೌಡ ಪೊಲೀಸ್ ಪಾಟೀಲ್ ಗುಡದನಾಳ.ಚಂದಾವಲಿ ತಿಮ್ಮಣ್ಣ, ಮಹಾಂತಗೌಡ ಪಾಟೀಲ್ ಎನ್ ಸ್ವಾಮಿ ಬಸಣ್ಣ ನೀರಲಕೇರಿ ಸಿದ್ದರಾಮಯ್ಯ ಲಿಂಗಣ್ಣ ದೇವಿಕೆರಿ ಇತರರು ಉಪಸ್ಥಿತರಿದ್ದರು.


## ದೇವದಾಸಿ ಮಹಿಳೆಯರು ಮತ್ತು ಇತರೆ ಮಹಿಳೆಯರಿಗೆ ಪಟ್ಟಾ ನೀಡಲು ಮನವಿ



ಸೆಪ್ಟೆಂಬರ್ 4 ರಂದು ಕೊಟ್ಟೂರು ತಾಲೂಕಾ ಕಾರ್ಯಾಲಯದ ಮುಂದೆ ದೇವದಾಸಿ ಮಹಿಳೆಯರು ಹಾಗೂ ಇತರೆ ಮಹಿಳೆಯರು ಈ ಹಿಂದೆ (ಅನಿರ್ದಿಷ್ಟಾವಧಿ) ಧರಣಿ ನಿರಂತರ ನಡೆಸಿದ್ದರು. ಆ ದಿನ ಪಟ್ಟ ನೀಡುವುದಾಗಿ ಒಪ್ಪಿಕೊಂಡಿದ್ದರು. ಆದರೆ ಮೂರು ತಿಂಗಳಾದರೂ ಪಟ್ಟಾ ಇಲ್ಲ ದೇವದಾಸಿ ಮಹಿಳೆಯರಿಗೂ ಮತ್ತು ಇತರ ಮಹಿಳೆಯರಿಗೆ ಪಟ್ಟಾ ಇಲ್ಲದಿದ್ದರೆ ತಮ್ಮ ಕಚೇರಿ ಮುಂದೆ ಎಲ್ಲಾ ಸಂಘಟನೆಯೊಂದಿಗೆ ನಿರಂತರ ಅನಿರ್ದಿಷ್ಟಾವಧಿ ಸತ್ಯಾಗ್ರಹ ಮಾಡಬೇಕಾಗುತ್ತದೆ. ಗುಡಿಯಾರ ಮಲ್ಲಿಕಾರ್ಜುನ್ ದೇವದಾಸಿ ಮಹಿಳೆಯರು ಭಾರತಿ ಆರ್ ಸರಸ್ವತಿ ಕೊಟ್ರಮ್ಮ ಹಾಲಮ್ಮ ಕೊಟ್ರುಬಸಮ್ಮ ಶಾರದಮ್ಮ ಕೊಟ್ಟೂರಿನ ಎಲ್ಲಾ ಸಂಘ ಸಂಸ್ಥೆಗಳು ಧರಣಿ ಕೂರ ಬೇಕಾಗುತ್ತದೆ ಎಂದು ಮನವಿಯನ್ನು ನೀಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು.**

## ಶಂಕರ್ ಚಲವಾದಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆ




**ಮುದ್ದೇಬಿಹಾಳ :** ಹಿಮಾಚಲ ಪ್ರದೇಶ್ ದಲ್ಲಿ ನಡೆಯಲಿರುವ ಅಂಡರ್ 19 ಕ್ರಿಕೆಟ್ ಟೆನಿಸ್ ಬಾಲ್ ಜೂನಿಯರ್ ರಾಷ್ಟ್ರೀಯ ಪಂದ್ಯಾವಳಿಗೆ ಕರ್ನಾಟಕ ರಾಜ್ಯದಿಂದ ವಿಶಾಲ್ ಶಂಕರ್ ಚಲವಾದಿ ರವರು ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಮುದ್ದೇಬಿಹಾಳ ತಾಲೂಕ ಆಡಳಿತದ ವತಿಯಿಂದ ತಹಸಿಲ್ದಾರ್ ಬಲರಾಮ್ ಕಟ್ಟಿಮನಿ ಮತ್ತು ಶಾಸಕರಾದ ಸಿ.ಎಸ್. ನಾಡಗೌಡ ಅಪ್ಪಾಜಿ ರವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಎಸ್ಸಿ ಮೋರ್ಚಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಕಾಂತ್ ಚಲವಾದಿ ಮತ್ತು ಸಿಕಂದರ್ ಜಾನ್ವೇಕರ್ ಹಾಗೂ ಗುತ್ತಿಗೆದಾರರಾಗಿರುವ ಎಲ್ಲಪ್ಪ ಹಡಲಗೇರಿ ಮತ್ತು ಶಂಕರ್ ಚಲವಾದಿ ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಭೂತನಾಳ ಕ್ರಾಸ್ ಬಳಿ ಇರುವ ಡಾ. ಬಿ. ಆರ್. ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ದಿಢೀರ್ ಭೇಟಿ

### ಒಂದು ವಾರದೊಳಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿ: ಜಿ.ಪಂ. ಸಿಇಓ ರಿಷಿ ಆನಂದ್ ಸೂಚನೆ

**ವಿಜಯಪುರ:**ಜಿಲ್ಲಾಪಂಚಾಯತಿಯಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ಶನಿವಾರ ಸಂಜೆ ವಿಜಯಪುರ ನಗರದ ಭೂತನಾಳ ಕ್ರಾಸ್ ಬಳಿ ಇರುವ ಡಾ. ಬಿ.ಆರ್.ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ದಿಢೀರ್ ಭೇಟಿ ನೀಡಿ, ಅಲ್ಲಿನ ಮೂಲಭೂತ ಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು.

ವಸತಿ ನಿಲಯದ ಅಡುಗೆ ಕೊಠಡಿ, ಭೋಜನಾಲಯ, ಸೋಲಾರ್ ವ್ಯವಸ್ಥೆ, ವಿದ್ಯಾರ್ಥಿ ಕೊಠಡಿಗಳು, ವಸತಿ ನಿಲಯದ ಆವರಣಕ್ಕೆ ಖುದ್ದಾಗಿ ತೆರಳಿ ಪರಿಶೀಲಿಸಿದರು. ಪ್ರತಿ ದಿನ ಅಡುಗೆ ಕೊಠಡಿ, ಭೋಜನಾಲಯ, ದಾಸ್ತಾನು ಕೊಠಡಿ, ನಿಲಯದ ಶೌಚಾಲಯ, ಸ್ನಾನದ ಗೃಹಗಳು, ಶುದ್ಧ ಕುಡಿಯುವ ನೀರಿನ ಘಟಕ ಈ ಎಲ್ಲ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವುದರ ಮೂಲಕ ಸ್ವಚ್ಛತೆ ಕಾಪಾಡಬೇಕು. ಸಮರ್ಪಕ ನಿರ್ವಹಣೆ ಮಾಡಬೇಕು. ವಸತಿ ನಿಲಯದ ಗ್ರಂಥಾಲಯಗಳಲ್ಲಿಸ್ಪರ್ಧಾತ್ಮಕಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪುಸ್ತಕಗಳು, ದಿನಪತ್ರಿಕೆ, ಮಾಸ ಪತ್ರಿಕೆ, ಉದ್ಯೋಗ ಮಿತ್ರ ಒದಗಿಸಲು ಕ್ರಮವಹಿಸಬೇಕು.ಗಣಕಯಂತ್ರ ಕೊಠಡಿಗಳಲ್ಲಿ ಕಡ್ಡಾಯವಾಗಿ ಇಂಟರ್ನೆಟ್ ವ್ಯವಸ್ಥೆ ಕಲ್ಪಿಸಿ, ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ಮಾಡಿಸಿ ಆರೋಗ್ಯದ ಕುರಿತು ಕಾಳಜಿ ವಹಿಸಬೇಕು.

ವಿದ್ಯಾರ್ಥಿಗಳು ಆಟೋಟಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಕ್ರೀಡಾ ಸಾಮಗ್ರಿಗಳನ್ನು ಪೂರೈಸಬೇಕು. 1000 ಲೀಟರ್ ಸಾಮರ್ಥ್ಯದ ವಾಟರ್ ಫಿಲ್ಟರ್‌ನ್ನು ಅಳವಡಿಸಿ ಶುದ್ಧ ಕುಡಿಯುವ ನೀರು ಒದಗಿಸಿ, ನಿರ್ಮಿತಿ ಕೇಂದ್ರದ ವತಿಯಿಂದ ನಿರ್ಮಾಣವಾಗುತ್ತಿರುವ ಶೌಚಾಲ ಯ ಕಾಮಗಾರಿ ಕಟ್ಟಡಗಳನ್ನು ಹದಿನೈದು ದಿನಗಳೊಳಗಾಗಿ ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಉಪಯೋಗಕ್ಕೆ ವ್ಯವಸ್ಥೆ ಮಾಡುವುದು. ಸ್ನಾನ ಗೃಹ ಮತ್ತು ಶೌಚಾಲಯಗಳನ್ನು ಶುಚಿಗೊಳಿಸಲು ಕ್ರಮ ವಹಿಸಬೇಕು. ನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ, ಊಟದ ಕೊಠಡಿಯಲ್ಲಿ ಪ್ರತಿದಿನ ಶುಚಿಯಾದ ಹಾಗೂ ರುಚಿಯಾದ ಆಹಾರ ಸಿದ್ಧಪಡಿಸಿ, ಶುಚಿತ್ವಕ್ಕೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಬಾಡಿಗೆ ಕಟ್ಟಡದಲ್ಲಿ ವಾಸಿಸಲು ವ್ಯವಸ್ಥೆ ಮಾಡುವುದು ಮತ್ತು ವಸತಿ ನಿಲಯದಲ್ಲಿ ಸಾಮಾನ್ಯ ದುರಸ್ತಿ ಕಾರ್ಯಗಳು ಬಾಕಿ ಇದ್ದಲ್ಲಿ ಕೂಡಲೇ ದುರಸ್ತಿಗೊಳಿಸುವಂತೆ ಸೂಚಿಸಿದ ಅವರು ಒಂದು ವಾರದೊಳಗೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿಕೊಡಲು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಳಿಕ ವಸತಿ ನಿಲಯದಲ್ಲಿ ಸಿದ್ಧಪಡಿಸಿದ ಆಹಾರ ಸೇವಿಸುವ ಮೂಲಕ ಗುಣಮಟ್ಟ ಪರೀಕ್ಷಿಸಿದರು. ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸಲು ಸೂಚನೆ ನೀಡಿದರು. ಸಿಇಓ ಅವರು, ವಸತಿ ನಿಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅಲ್ಲಿನ ವ್ಯವಸ್ಥೆಗಳ ಕುರಿತು ಚರ್ಚಿಸಿದರು. ವಿದ್ಯಾರ್ಥಿ ಜೀವನದಲ್ಲಿ ಓದು ಮುಖ್ಯ ಓದಿನ ಕಡೆಗೆ ಹೆಚ್ಚು ಗಮನ ನೀಡಬೇಕು. ಸ್ಪರ್ಧಾತ್ಮಕ ಜ್ಞಾನದ ಬಗ್ಗೆಯೂ ಕೂಡ ಗಮನ ಹರಿಸಬೇಕು. ಅನೇಕ ಸ್ಪರ್ಧಾತ್ಮ ಪರೀಕ್ಷೆಗಳಿಗೆ ಈಗಿನಿಂದಲೇ ಸಿದ್ಧತೆ ಕೈಗೊಳ್ಳಬೇಕು. ಪ್ರಮುಖ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಯೋಜ ನಾಧಿಕಾರಿಗಳಾದ ನಿಂಗಪ್ಪ ಗೋಠೆ, ಉಪಕಾರ್ಯದರ್ಶಿಗಳಾದ ಡಾ. ವಿಜಯಕುಮಾರ ಆಜೂರ, ಯೋಜನಾ ನಿರ್ದೇಶಕರಾದ ಸಿ.ಬಿ. ದೇವರಮನಿ, ಮುಖ್ಯ ಲೆಕ್ಕಾಧಿಕಾರಿಗಳಾದ ರಾ ಮಣ್ಣ ಅಥಣಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪುಂಡಲೀಕ ಮಾನವರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಈರಣ್ಣ ಆಶಾಪು ರ, ಬಿ.ಜೆ. ಇಂಡಿ, ನಿಲಯ ಪಾಲಕರು,ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಶ್ರೀ ಕೃಷ್ಣ–ರಾಧೆಯ ವೇಷ ಧರಿಸಿ ಮಿಂಚಿದ ಮಕ್ಕಳು



**ನಿಡಗುಂದಿ :** ಸಮೀಪದ ಗೊಳಸಂಗಿ ಕುವೆಂಪು ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ಶ್ರೀ ಕೃಷ್ಣ ಜನ್ಮಾಷ್ಟಮಿಯ ಕುರಿತು ಮಾತನಾಡಿದ ಶಾಲೆಯ ಮುಖ್ಯ ಗುರುಮಾತೆ ವಹೀದಾ ಪಠಾಣ ಭಾರತದ ಪ್ರಮುಖ ಹಬ್ಬಗಳಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಬ್ಬವೂ ಕೂಡ ಒಂದು ಈ ಹಬ್ಬದಂದು ವಿಶೇಷವಾಗಿ ಮಕ್ಕಳಿಗೆ ಶ್ರೀ ಕೃಷ್ಣ ರಾಧೆಯಂತೆ ಉಡುಗೆ ತೊಡಿಸಿ ಶೃಂಗಾರ ಮಾಡುವ ಹಬ್ಬವಾಗಿದೆ.

ಈ ಹಬ್ಬವು ಎಲ್ಲರಿಗೂ ಖುಷಿ ತರುವ ಹಬ್ಬವಾಗಿದೆ. ಈ ಹಬ್ಬವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ ಮನೆ ಮನೆಯಲ್ಲಿ ಮಕ್ಕಳು ಶ್ರೀ ಕೃಷ್ಣ ಹಾಗೂ ರಾಧಾ ಆಗುತ್ತಾರೆ ಮಕ್ಕಳಿಗೆ ರಾಧಾ–ಕೃಷ್ಣ ವೇಷಭೂಷಣ ತೊಡಿಸಿ ಪೋಷಕರು ಸಂಭ್ರಮ ವ್ಯಕ್ತಪಡಿಸುತ್ತಾರೆ. ಹುಡುಗರು ಎತ್ತರಕ್ಕೆ ಕಟ್ಟಿದ ಬೆಣ್ಣೆ ಇರುವ ಮಡಿಕೆಯನ್ನು ಒಡೆಯುತ್ತಾರೆ. ಹೀಗಾಗಿ ಈ ಹಬ್ಬವು ಮಕ್ಕಳಿಗೆ ಖುಷಿ ತರುವ ಹಬ್ಬವಾಗಿದೆ.

ಈ ಸಂದರ್ಭದಲ್ಲಿ ಶಾಲೆಯ ಮಕ್ಕಳು ಶ್ರೀ ಕೃಷ್ಣ–ರಾಧೆಯ ಹಾಗೆ ಮಿಂಚಿ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕಿಯರಾದ ಗೀತಾ ನಾಯಕ್ ,ಅಶ್ವಿನಿ ಚಲವಾದಿ,ವಾಕೀಯಾ ಡೋಲಚಿ ಹಾಜರಿದ್ದರು.

## ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಕಾರಿ: ರೋಹಿಣಿ ಕೊಟೆಗಾರ

**ಕೊಪ್ಪಳ :** ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಕಾರಿಯಾಗುತ್ತದೆ ಎಂದು ಕೊಪ್ಪಳ ಅಭಿವೃದ್ಧಿ ಯೋಜನಾಧಿಕಾರಿಗಳಾದ ರೋಹಿಣಿ ಕೊಟೆಗಾರ ಅವರು ಹೇಳಿದರು.



ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರ್ಗಿ, ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ಹಾಗೂ ಕಲಿಕೆ ಟಾಟಾ ಸಹಯೋಗದಲ್ಲಿ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿ ಕೊಪ್ಪಳ ಶಿಶು ಅಭಿವೃದ್ಧಿ ಯೋಜನೆಯ ಕೊಪ್ಪಳ ಬಿ ವಲಯದ ಅಂಗನವಾಡಿ ಕಾರ್ಯಕರ್ತೆಯರಿಗೆ ಆಗಸ್ಟ್ 27ರಂದು ನಗರದ ಗೌರಿ ಅಂಗಳದ ಸರ್ಕಾರಿ ಶಾಲೆಯಲ್ಲಿ ನಡೆದ 5ನೇ ಹಂತದ ಮೂರು ದಿನದ ಶಾಲಾ ಪೂರ್ವ ಶಿಕ್ಷಣ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಾಯವಾಗುತ್ತದೆ. ಪ್ರತಿ ಅಂಗನವಾಡಿ ಕೇಂದ್ರದಲ್ಲಿಯೂ, ಮಕ್ಕಳ ಭಾಷೆ ಬೌದ್ಧಿಕ ಬೆಳವಣಿಗೆಗೆ ಶಾಲಾ ಪೂರ್ವ ಶಿಕ್ಷಣವನ್ನು ಮಕ್ಕಳಿಗೆ ಕಲಿಸಬೇಕೆಂದು. ಈ ಹಿನ್ನೆಲೆಯಲ್ಲಿ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ತರಬೇತಿಯಲ್ಲಿ ಮಾಹಿತಿ ತಿಳಿದುಕೊಂಡು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ ಅವರು, ತರಬೇತಿಯ ಸಾಮಗ್ರಿಗಳನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶಿವಶರಣಪ್ಪ ಗದ್ದಿ, ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರ ಉಪನ್ಯಾಸಕರಾದ ಕೃಷ್ಣ, ಕಲಿಕೆ ಟಾಟಾ ಟ್ರಸ್ಟ್ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರಾದ ಅಶೋಕ್, ಹಿರಿಯ ಮೇಲ್ವಿಚಾರಕಿಯರಾದ ಜಯಶ್ರೀ ಕೂಲಿ, ಮೇಲ್ವಿಚಾರಕಿಯರಾದ ಭುವನೇಶ್ವರಿ ಹಾಗೂ ಕಮಲಾಕ್ಷಿ ಸೇರಿದಂತೆ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು. ತರಬೇತಿಯಲ್ಲಿ 23 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ಭಾರತೀಯ ಹಬ್ಬಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಿ



**ರಬಕವಿ–ಬನಹಟ್ಟಿ :** ಭಾರತೀಯ ಹಬ್ಬಗಳು ಬಹಳಷ್ಟು ವಿಶೇಷತೆಯನ್ನು ಮತ್ತು ವಿವಿಧತೆಯನ್ನು ಪಡೆದುಕೊಂಡಿದ್ದು , ಈ ಹಬ್ಬಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುವುದು ಕೂಡಾ ಮಹತ್ವದ್ದಾಗಿದೆ ಎಂದು ಇಲ್ಲಿನ ಮಾಹೇಶ್ವರಿ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ನೂತನ ಕಾಬ್ರಾ ತಿಳಿಸಿದರು.

ಶುಕ್ರವಾರ ಇಲ್ಲಿನ ಬಾಲಾಜಿ ಮಂದಿರದ ಮುಂಭಾಗದಲ್ಲಿ ಬತಬಾರತ ಹಬ್ಬದ ಅಂಗವಾಗಿ ಗೋವುಗಳಿಗೆ ಪೂಜೆ ಸಲ್ಲಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜದ ಎಲ್ಲಾ ಮಹಿಳೆಯರು ಗೋ ಮಾತೆಗೆ ಪೂಜೆ ಸಲ್ಲಿಸಿದ ನಂತರ ಪೂರ್ತಿದಿನ ಉಪವಾಸ ವೃತವನ್ನು ಕೈಗೊಳ್ಳುತ್ತಾರೆ. ಯಾವುದೇ ಮನೆಯಲ್ಲಿ ಅಡುಗೆಯನ್ನು ಮಾಡುವುದಿಲ್ಲ. ಇದೊಂದು ಮಾಹೇಶ್ವರಿ ಸಮಾಜದಲ್ಲಿ ಮಹಿಳೆಯರು ಆಚರಿಸುವ ಪವಿತ್ರವಾದ ಹಬ್ಬವಾಗಿದೆ ಎಂದು ಕಾಬ್ರಾ ತಿಳಿಸಿದರು.

ಈ ಸಂದರ್ಭದಲ್ಲಿ ಗಾಯತ್ರಿ ಭೂತಡಾ, ನೀತಾ ರಾಠಿ, ಉಮಾ ಭಟ್ಟಡ, ನೇತಲ್ ರಾಠಿ, ಅರ್ಚನಾ ಸಾರಡಾ, ಜ್ಯೋತಿ ಭಟ್ಟಡ, ಪುಂಗಲೀಯಾ, ಗೀತಾ ಭಟ್ಟಡ, ಲಡ್ಡಾ ಪರಿವಾರದ ಮಹಿಳೆಯರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಚಿಮ್ಮಡ; ಪೋಲಿಸ್ ಜನಸಂಪರ್ಕ ಸಭೆ ದೇಸಿ ಸಂಸ್ಕೃತಿ ಉಳಿಸಲು ಠಾಣಾಧಿಕಾರಿ ಕರೆ



**ಚಿಮ್ಮಡ :** ಗಣೇಶೋತ್ಸವದ ಮೆರವಣಿಗೆಗಳಲ್ಲಿ ವಿದೇಶಿ ಡಿಜೆ ಗಳನ್ನು ಹಚ್ಚಿ ಶಬ್ದಮಾನಿನ್ಯ ಮಾಡುವ ಬದಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ದೇಶಿ ಸಂಸ್ಕೃತಿ ಬೆಳೆಸಬೇಕೆಂದು ಬನಹಟ್ಟಿ ಠಾಣಾಧಿಕಾರಿ ಶಾಂತಾ ಹಳ್ಳಿ ಹೇಳಿದರು.

ಗ್ರಾಮದ ಭಾಹುಸಾಹೇಬರ ಮಠದಲ್ಲಿ ಗುರುವಾರ ಆಯೋಜಿಸಲಾಗಿದ್ದ ಶಾಂತಿಪಾಲನಾ, ಜಸಂಪರ್ಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿ ಭಾರತೀಯ ಸಂಸ್ಕೃತಿಯನ್ನು ವಿದೇಸಿಗರು ಅಳವಡಿಸಿಕೊಂಡು ಆರೋಗ್ಯಯುತ ನೆಮ್ಮದೀಯ ಜೀವನ ನಡೆಸುತಿದ್ದಾರೆ ಆದರೆ ನಾವೂ ವಿದೇಶಿಗರಿಗೂ ಬೇಡವಾದ ಪದ್ದತಿಗಳನ್ನು ಅಳವಡಿಸಿಕೊಂಡು ಎಲ್ಲ ರೀತಿಗಳಿಂದಲೂ ಹಾಣಿ ಅನುಭವಿಸುತಿದ್ದೇವೆ ಎಂದ ಅವರು ಮುಂಬರುವ ಗಣೇಶೋತ್ಸವ ಹಾಗೂ ಈದ ಮೀಲಾದ ಹಬ್ಬಗಳನ್ನು ಸರಕಾರದ ಮಾರ್ಗಸೂಚಿಯಂತೆ ಶಾಂತರೀತಿಯಲ್ಲಿ ಆಚರಿಸಲು ಮನವಿ ಮಾಡಿದರು ಹಾಗೂ ಗಣೇಶೋತ್ಸವಕ್ಕೆ ಹಲವು ಇಲಾಖೆಗಳ ಅನುಮತಿ ಪಡೆಯಲು ಏಕಗವಾಕ್ಷಿ ಪದ್ದತಿ ಠಾಣೆಯಲ್ಲಿಯೇ ಪ್ರಾರಂಭಿಸಲಿದ್ದು ಇದರ ಪ್ರಯೋಜನ ಪಡೆಯಬೇಕೆಂದರು. ಗ್ರಾಂ.ಪಂ. ಮಾಜಿ ಅಧ್ಯಕ್ಷ ಪ್ರಭು ಪಾಲಭಾವಿ ಮಾತನಾಡಿ ಗ್ರಾಮದಲ್ಲಿ ನಡೆಯುವ ಯಾವುದೇ ಉತ್ಸವಗಳಲ್ಲಿ ಎಲ್ಲ ಸಮಾಜಬಾಂಧವರೂ ಪಾಲ್ಗೊಳ್ಳುವ ಮೂಲಕ ಶಾಂತಿ ಕಾಪಾಡಿಕೊಳ್ಳುತ್ತೇವೆಂದರು ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಗುರಲಿಂಗಪ್ಪಾ ಪೂಜಾರಿ, ಇಲಾಹಿ ಜಮಖಂಡಿ ಮಾತನಾಡಿದರು. ಗ್ರಾಮದ ಪ್ರಮುಖರಾದ ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ರಾಮಣ್ಣ ಬಗನಾಳ, ಅಣ್ಣಪ್ಪಗೌಡ ಪಾಟೀಲ, ಬಸವರಾಜ ಕುಂಚನೂರ, ಬಿ.ಎಸ್. ಪಾಟೀಲ, ಗುರಪ್ಪಾ ಬಳಗಾರ, ರಾಚಯ್ಯ ಮಠಪತಿ, ಗ್ರಾ.ಪಂ. ಸದಸ್ಯ ಮನೋಜ ಹಟ್ಟಿ, ಮಹಾಲಿಂಗ ಮಾಯಣ್ಣವರ ಸೇರಿದಂತೆ ಎಲ್ಲ ಸಮಾಜದ ಮುಖಂಡರು ಗಣೇಶೋತ್ಸವ ಸೇವಾ ಸಮೀತಿಯ ಸದಸ್ಯರು ಪಾಲ್ಗೊಂಡಿದ್ದರು.

ಬೀಟ್ ಸಿಬ್ಬಂದಿ ಬಿ.ಐ. ಹುನ್ನೂರ ಹಾಗೂ ಆರ್.ಬಿ. ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು.

## ಉಭಯ ಪುರಸಭೆಗಳ ಸದಸ್ಯರ ಉಚ್ಚಾಟನೆ ನಿಶ್ಚಿತ

**ರಬಕವಿ–ಬನಹಟ್ಟಿ :** ಕಳೆದ ವಾರ ಮಹಾಲಿಂಗಪೂರ ಹಾಗು ತೇರದಾಳ ಪುರಸಭೆಗಳ ಅಧ್ಯಕ್ಷ–ಉಪಾಧ್ಯಕ್ಷ ಪದದ ಚುನಾವಣೆಯಲ್ಲಿ ಬಿಜೆಪಿಗೆ ಭಾರೀ ಮುಖಭಂಗ ಅನುಭವಿಸಿದ್ದರ ಹಿನ್ನೆಲೆಯಲ್ಲಿ ಸದಸ್ಯರ, ಮುಖಂಡರ ಹಾಗು ಶಾಸಕರ ಮಧ್ಯೆ ವಾಕ್ಸಮರ ನಡೆದು ಆರೋಪ ಪ್ರತ್ಯಾರೋಪಗಳು ನಡೆಯುತ್ತಲೇ ಇವೆ. ಆದರೆ ಯಾರು ತಪ್ಪಿತಸ್ಥರೆಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ.



ಈಗಾಗಲೇ ಮಹಾಲಿಂಗಪೂರದ ಕೆಲ ಮುಖಂಡರು ಹಾಗು ಸದಸ್ಯರು ಸೇರಿ ಪಕ್ಷದ ಜಿಲ್ಲಾಧ್ಯಕ್ಷ ಶಾಂತಕುಮಾರ ಪಾಟೀಲರಿಗೆ ಮನವಿ ಸಲ್ಲಿಸಿ ಶಾಸಕರ ರಾಜಿನಾಮೆ ಹಾಗೂ ಅವರ ಉಚ್ಚಾಟನೆಗೆ ಪಟ್ಟು ಹಿಡಿದಿದ್ದರೆ, ಇತ್ತ ಸದಸ್ಯರು ವಿಪ್ ಜಾರಿಯ ಉಲ್ಲಂಘನೆ ಹಾಗು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ಸಿಲುಕಿದ ಕಾರಣ ಪಕ್ಷದಿಂದ ಉಚ್ಚಾಟನೆ ಆಗುವಂತಾಗಿದೆ.

ಈ ಕುರಿತು ಬನಹಟ್ಟಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ತೇರದಾಳ ಶಾಸಕ ಸಿದ್ದು ಸವದಿ, ಈಗಾಗಲೇ ತೇರದಾಳದಲ್ಲಿ ವಿಪ್ ಉಲ್ಲಂಘನೆ ಮಾಡಿದವರ ವಿರುದ್ಧ ಶಿಸ್ತು ಕ್ರಮ ಹಾಗು ಮಹಾಲಿಂಗಪೂರದ ಏಳು ಜನ ಬಿಜೆಪಿ ಸದಸ್ಯರನ್ನೊಳಗೊಂಡು ಪುರಸಭೆ ಸದಸ್ಯರ ಉಚ್ಚಾಟನೆಯಾಗಲಿದೆ. ಇಂದೇ ನೋಟಿಸ್ ಜಾರಿ ಮಾಡಿದ್ದಲ್ಲದೆ ಇನ್ನೆರಡು ದಿನಗಳಲ್ಲಿ ಪಕ್ಷದಿಂದ ವಜಾ ಮಾಡುವ ಕುರಿತು ಸವದಿ ಸ್ಪಷ್ಟಪಡಿಸಿದರು.

ಪಕ್ಷದ್ರೋಹಿಗಳಿಂದ ಕೈ ತಪ್ಪಿದ ಅಧಿಕಾರ: ಮಹಾಲಿಂಗಪೂರ ಹಾಗು ತೇರದಾಳ ಎರಡೂ ಪುರಸಭೆಗಳಲ್ಲಿ ಕೆಲ ಪಕ್ಷದ್ರೋಹಿಗಳ ಕಪಟ ನಡತೆಯಿಂದ ಸಮಸ್ಯೆ ಎದುರಿಸುವಂತಾಗಿದೆ. ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಇಂಥವರಿಗೆ ಅವಕಾಶವಿರುವುದಿಲ್ಲವೆಂಬ ಸಂದೇಶದಿಂದಲೇ ಪಕ್ಷದಿಂದ ಅವರನ್ನು ವಜಾ ಮಾಡುವ ನಿರ್ಧಾರ ಮಾಡಲಾಗಿದೆ ಎಂದು ಸವದಿ ತಿಳಿಸಿದರು.

## ಬಡವರಿಗೆ ಉಚಿತವಾಗಿ ಡಯಾಲಿಸಿಸ್ ಕೇಂದ್ರ: ಸಿದ್ದು ಸವದಿ



**ರಬಕವಿ–ಬನಹಟ್ಟಿ :** ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಕೇಂದ್ರ ಆರಂಭಗೊಂಡಿದ್ದು, ರಬಕವಿ ಬನಹಟ್ಟಿ ಹಾಗೂ ತೇರದಾಳ ಮತಕ್ಷೇತ್ರದ ಬಡ ರೋಗಿಗಳು ಈ ಘಟಕದ ಸೌಲಭ್ಯವನ್ನು ಉಚಿತವಾಗಿ ಪಡೆದುಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಶುಕ್ರವಾರ ರಬಕವಿ ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ಡಯಾಲಿಸಿಸಗಾಗಿ ಈ ಭಾಗದ ಜನರು ಮೊದಲು ವಿಜಯಪುರ, ಬಾಗಲಕೋಟೆ, ಬೆಳಗಾವಿಗೆ ಹೋಗುವುದು ಅನಿವಾರ್ಯವಾಗಿತ್ತು. ಆದರೆ ಇದೀಗ ರಬಕವಿ ಬನಹಟ್ಟಿಯಲ್ಲಿಯೇ ಈ ಘಟಕ ಆರಂಭವಾಗಿದ್ದು ಸಂತಸದ ಸಂಗತಿಯಾಗಿದೆ. ದಿನಾಲೂ ಇಲ್ಲಿ ಆರು ಜನರಿಗೆ ಉಚಿತವಾಗಿ ಸೇವೆಯನ್ನು ನೀಡಲಾಗುವುದು. ಈ ಡಯಾಲಿಸಿಸ್ ಕೇಂದ್ರದ ಸೌಲಭ್ಯವನ್ನು ಬಡ ರೋಗಿಗಳು ಪಡೆದುಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಜಿಲ್ಲಾ ಸಮೀಕ್ಷಣಾಧಿಕಾರಿ ದಯಾನಂದ ಕರೆನ್ನವರ ಮಾತನಾಡಿ, ಇಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ಡಯಾಲಿಸಿಸ್ ಕೇಂದ್ರವನ್ನು ಆರಂಭಿಸಲಾಗಿದೆ. ಕೇಂದ್ರಕ್ಕೆ ಬೇಕಾದ ಸಿಬ್ಬಂದಿ ವರ್ಗದವರಿಗೂ ಕೂಡಾ ತರಬೇತಿಯನ್ನು ನೀಡಿ ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಡಾ. ಎನ್. ಎಂ. ನದಾಫ್ ಮಾತನಾಡಿ, ಸಧ್ಯ ಎರಡು ಘಟಕಗಳನ್ನು ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಾದರೆ ಇನ್ನೆರಡು ಘಟಕಗಳನ್ನು ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ನಗರಸಭೆ ಅಧ್ಯಕ್ಷೆ ವಿದ್ಯಾ ಧಬಾಡಿ, ವೈದ್ಯರಾದ ಡಾ. ವೀರೇಶ ಹುಡೇದಮನಿ, ಸುನೀಲ ಹನಗಂಡಿ, ಕಾವೇರಿ ಹಳ್ಯಾಳ, ಆರ್. ಎನ್. ನದಾಫ್, ಆಯೇಷಾ ತಾಂಬೋಳಿ, ಪೌರಾಯುಕ್ತ ಜಗದೀಶ ಈಟಿ, ಶ್ರೀಶೈಲ ಬೀಳಗಿ, ಈರಣ್ಣ ಚಿಂಚಖಂಡಿ, ಅಶೋಕ ರಾವಳ, ಆಸ್ಪತ್ರೆಯ ಅಧೀಕ್ಷಕಿ ಸ್ಮಿತಾ ಕಾಳಗಿ, ಶಿವಾನಂದ ಕಾಗಿ, ಮುಖೇಶ ಬನಹಟ್ಟಿ, ಗಂಗಾಧರ ಗೊಬ್ಬಾಣಿ, ಅಪ್ಪಾಜಿ ಹೂಗಾರ, ಗೋಪಾಲ ಕರ್ಜಗಿ, ಮಹಾಲಿಂಗ ಗೋಣಿ, ರವಿ ವಾಘ್ಮೋರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ: ಡಿವೈಎಸ್ಪಿ ಈ. ಶಾಂತವೀರ ಗಣೇಶೋತ್ಸವ ಒಂದೇ ಸೂರಿನಡಿಯಲ್ಲಿ ಎಲ್ಲ ಪರವಾನಿಗೆಗಳು

**ರಬಕವಿ–ಬನಹಟ್ಟಿ :** ಸರಕಾರದ ನಿರ್ದೇಶನಗಳನ್ನು ಪಾಲಿಸಿ, ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ ಎಂದು ಜಮಖಂಡಿ ಉಪವಿಭಾಗದ ಡಿ.ವೈ.ಎಸ್.ಪಿ. ಈ. ಶಾಂತವೀರ ಹೇಳಿದರು.

ಅವರು ಬನಹಟ್ಟಿಯ ಪೊಲೀಸ್ ಠಾಣೆಯಲ್ಲಿ ಗಣೇಶೋತ್ಸವ ಹಾಗೂ ಈದ ಮಿಲಾದ ಹಬ್ಬದ ನಿಮಿತ್ಯ ನಡೆದ ಶಾಂತಿ ಪಾಲನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಗಣೇಶೋತ್ಸವಕ್ಕೆ ಒಂದೇ ಸೂರಿನ ಅಡಿಯಲ್ಲಿ ವಿವಿಧ ಇಲಾಖೆಗಳ ಪರವಾನಿಗೆಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು. ಗಣೇಶ ಮಂಡಳಿಯವರು ಸರ್ಕಾರದ ಮಾರ್ಗ ಸೂಚಿಗಳಂತೆ ಹಬ್ಬವನ್ನು ಆಚರಣೆ ಮಾಡಬೇಕು. ಮೆರವಣಿಗೆಯ ಸಂದರ್ಭದಲ್ಲಿ ಮಹಿಳೆಯರಿಗೆ, ಹಿರಿಯರಿಗೆ ಸೇರಿದಂತೆ



ಮತ್ತೊಬ್ಬರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ತೊಂದರೆಯಾಗದಂತೆ, ರಸ್ತೆಯಲ್ಲಿ ದಟ್ಟಣೆಯಾಗದಂತೆ ಹಬ್ಬವನ್ನು ಆಚರಿಸಿ ಎಂದರು.

ರಬಕವಿ–ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ಮಾತನಾಡಿ, ಪಿಓಪಿ ಗಣಪತಿಗಳನ್ನು ನಿಷೇಧಿಸಲಾಗಿದೆ. ಆ ಕುರಿತು ಜಾಗ್ರತರಾಗಿರಿ. ಪರಿಸರ ಸ್ನೇಹಿ ಗಣಪತಿಗಳನ್ನು ಬಳಸಿ ಎಂದರು.

ಕಾರ್ಯಕ್ರಮದಲ್ಲಿ ಬನಹಟ್ಟಿ ವೃತ್ತದ ಸಿಪಿಐ ಸಂಜೀವ ಬಳಗಾರ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಶಾಂತ ರೀತಿಯಿಂದ ಹಬ್ಬ ಆಚರಿಸಿ, ಗಣೇಶ ಕೂಡ್ರಿಸುವಲ್ಲಿ ಅನುಮತಿ ಕಡ್ಡಾಯ. ಸರಿಯಾದ ಮಾಹಿತಿ ನೀಡಿ ಪೊಲೀಸ್ ಇಲಾಖೆಗೆ ಸಹಕರಿಸಿ. ವಿಸರ್ಜನೆ ವೇಳೆ ಕರ್ಕಶ ಹಾಗು ಡಾಲ್ಬಿಗಳಂತಹ ಧ್ವನಿವರ್ಧಕಗಳಿಂದ ದೂರವಿದ್ದು, ದೇಶೀ ವಾದ್ಯಗಳನ್ನು ಬಳಸುವುದರಿಂದ ಉತ್ಸವಕ್ಕೆ ಮತ್ತಷ್ಟು ಮೆರಗು ಬರಲಿದೆ. ಪರಿಸರ ಸ್ನೇಹಿ ಗಣಪತಿಗಳನ್ನು ಬಳಸಿ, ನಗರಸಭೆಯವರು ನಿರ್ಮಿಸಿರುವ ಕೃತಕ ನೀರಿನ ಹೊಂಡಗಳಲ್ಲಿ ವಿಸರ್ಜನೆ ಮಾಡಿ ಎಂದರು.

ಹೆಸ್ಕಾಂ ಅಧಿಕಾರಿ ಪ್ರಭಾಕರ ಸತ್ತಿ, ಶಿವಾನಂದ ಗಾಯಕವಾಡ, ಬಸವಪ್ರಭು ಹಟ್ಟಿ, ಸಿದ್ದನಗೌಡ ಪಾಟೀಲ, ಶ್ರೀಶೈಲ ಧಬಾಡಿ, ನಗರಸಭೆ ಅಧಿಕಾರಿ ಶೋಭಾ ಹೊಸಮನಿ, ಪಿಎಸ್‌ಐ ಶಾಂತಾ ಹಳ್ಳಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಗ್ನಿ ಶಾಮಕದಳದ ರಮೇಶ ಚಿವಟೆ, ವಿರುಪಾಕ್ಷಯ್ಯ ಮಠಪತಿ, ಅಶೋಕ ರಾವಳ, ಈರಣ್ಣ ಚಿಂಚಖಂಡಿ, ದಾನಪ್ಪ ಹುಲಜತ್ತಿ, ಅಣ್ಣಪ್ಪ ಬಾಣಕಾರ, ಹೊನ್ನಪ್ಪ ಬಿರಡಿ, ಶಿವಶಂಕರ ಬಾಡಗಿ, ಅಶೋಕ ಭದ್ರನ್ನವರ, ಪ್ರಶಾಂತ ಕೊಳಕಿ, ಬುಡನ್ ಜಮಾದಾರ, ಅಶೋಕ ಬೋಸ್ಲೆ, ಪ್ರಕಾಶ ಸಿಂಘನ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪಿ.ಸಿ & ಪಿ.ಎನ್.ಡಿ.ಟಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆ

## ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣಲಿಂಗ ಆಯ್ಕೆಗೆ ಪ್ರಯತ್ನಿಸಿದಲ್ಲಿ ಕಠಿಣ ಕಾನೂನ ಕ್ರಮ: ಡಾ ಲಿಂಗರಾಜು

**ಕೊಪ್ಪಳ :** ಪಿ.ಸಿ & ಪಿ.ಎನ್.ಡಿ.ಟಿ ಕಾಯ್ದೆ ಅಡಿ ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣಲಿಂಗ ಆಯ್ಕೆಗೆ ಅವಕಾಶವಿಲ್ಲ. ಆದಾಗ್ಯೂ ಇಂತಹ ಕಾನೂನುಬಾಹಿರಕ್ರಮಗಳಲ್ಲಿಭಾಗಿಯಾದಲ್ಲಿ ಅಂತವರ ವಿರುದ್ಧ ಕಠಿಣವಾದ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು ಅವರು ಹೇಳಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಆಗಸ್ಟ್ 27ರಂದು ಆಯೋಜಿಸಿದ್ದ ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ ಮತ್ತು ಎಂ.ಟಿ.ಪಿ ಕಾಯ್ದೆಯ ಅಡಿ ಬರುವ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ-1994 ರಡಿಯಲ್ಲಿ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧವಾಗಿದೆ. ಕಾಯ್ದೆ ಅನುಸಾರ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಕುರಿತಂತೆ ಯಾವುದೇ ರೀತಿಯ ಜಾಹೀರಾತು ನೀಡುವಂತಿಲ್ಲ. ಸರ್ಕಾರಿ ಅಥವಾ ಖಾಸಗಿ ಯಾವುದೇ ವೈದ್ಯರು ಇಂತಹ ಕೃತ್ಯಗಳಲ್ಲಿ ಭಾಗಿಯಾದಲ್ಲಿ ಅವರ ವಿರುದ್ಧ ಕಠಿಣ ಕ್ರಮಕ್ಕೆ ಅವಕಾಶವಿದೆ. ಈ ಕಾಯ್ದೆಯಡಿ ತಪಾಸಣಾ ಮತ್ತು ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಹಾಗೂ ತಪಾಸಣಾ ಸಮಿತಿಯನ್ನು ರಚಿಸಲಾಗಿದೆ. ತಪಾಸಣಾ ಸಮಿತಿಯು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಸಲಹಾ ಸಮಿತಿ ಸಭೆಯಲ್ಲಿ ವರದಿ ನೀಡಬೇಕು ಎಂದರು. ಎಲ್ಲ ಸ್ಕ್ಯಾನಿಂಗ್ ಸೆಂಟರ್‌ಗಳು ಪಿ.ಸಿ & ಪಿ.ಎನ್.ಡಿ.ಟಿ ಕಾಯ್ದೆಯಡಿ ನಿಯಮಾನುಸಾರ ನೋಂದಣಿ ಮಾಡಿಕೊಳ್ಳಬೇಕು ಹಾಗೂ ನೋಂದಣಿ ಅವಧಿ ಪೂರ್ಣಗೊಳ್ಳುವುದಕ್ಕಿಂತ ಮೂರು ತಿಂಗಳ ಮುಂಚೆ ಅರ್ಜಿ ಸಲ್ಲಿಸಿ ನವೀಕರಣ ಮಾಡಿಕೊಳ್ಳಬೇಕು. ಸ್ಕ್ಯಾನಿಂಗ್ ಕುರಿತಾದ ಮಾರ್ಗಸೂಚಿಗಳನ್ನು ಪಾಲಿಸಿ ನಿಗದಿತ ನಮೂನೆಗಳನ್ನು ನಿರ್ವಹಿಸಬೇಕು. ನೋಂದಣಿ/ ಪರವಾನಗಿ ನವೀಕರಣವಿಲ್ಲದ ಆರೋಗ್ಯ ಸಂಸ್ಥೆಗಳ ಮೇಲೆ, ನಿಗದಿತ ನಿಯಮ ಪಾಲನೆ ಹಾಗೂ ದಾಖಲಾತಿಗಳನ್ನು ನಿರ್ವಹಿಸದ ಆರೋಗ್ಯ ಸಂಸ್ಥೆಗಳನ್ನು ಮುಚ್ಚಿಸಲು ಅಥವಾ ಸ್ಥಗಿತಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ರವೀಂದ್ರನಾಥ್ ಎಂ.ಎಚ್ ಅವರು ಮಾತನಾಡಿ, ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ ಅನುಸಾರ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ನಿಷೇಧಿಸಲಾಗಿದೆ. ಸರ್ಕಾರಿ ಅಥವಾ ಖಾಸಗಿ ಯಾವುದೇ ವೈದ್ಯರು ಇಂತಹ ಕೃತ್ಯಗಳಲ್ಲಿ ಭಾಗಿಯಾದಲ್ಲಿ ಅವರಿಗೆ ಕಾರಾಗೃಹ ಶಿಕ್ಷೆ ಸಹಿತ ದಂಡವನ್ನು ವಿಧಿಸಲಾಗುವುದು. ಮೊದಲ ಅಪರಾಧಕ್ಕೆ 5 ವರ್ಷ ವೈದ್ಯಕೀಯ ಪರವಾನಿಗೆಯನ್ನು ರದ್ದುಪಡಿಸುವುದು. ನಂತರದಅಪರಾದಕ್ಕೆಸಂಬಂಧಿಸಿದವೈದ್ಯರ ವೈದ್ಯಕೀಯ ಪರವಾನಿಗೆಯನ್ನು ರಾಜ್ಯ ವೈದ್ಯಕೀಯ ಮಂಡಳಿಯಿಂದ ಶಾಶ್ವತವಾಗಿ ತೆಗೆದು ಹಾಕಿ, ವೈದ್ಯಕೀಯ ವೃತ್ತಿ ನಡೆಸಲು ಆಜೀವ ನಿಷೇಧ ಹೇರಲಾಗುವುದು. ಒಂದು ವೇಳೆ ಸ್ವತಃ ಮಹಿಳೆ, ಆಕೆ-ಯ ಪತಿ ಅಥವಾ ಸಂಬಂಧಿಕರು ಭ್ರೂಣ ಲಿಂಗ ಪತ್ತೆಗೆ ಯತ್ನಿಸಿ, ವೈದ್ಯರಿಗೆ ಒತ್ತಡ ಹೇರಿದಲ್ಲಿ ಅವರಿಗೆ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ರೂ.50 ಸಾವಿರದಿಂದ 1 ಲಕ್ಷದವರೆಗೆ ದಂಡವನ್ನು ವಿಧಿಸಲು ಅವಕಾಶವಿದೆ ಎಂದು ಸಭೆಗೆ ತಿಳಿಸಿದರು.

ಸಲಹಾ ಸಮಿತಿಗೆ ಅಧ್ಯಕ್ಷರ ಆಯ್ಕೆ: ಕೊಪ್ಪಳ ಜಿಲ್ಲೆಯ ಜಿಲ್ಲಾ ಮಟ್ಟದ, ಜಿಲ್ಲಾ ಸಲಹಾ ಸಮಿತಿ (ಡಿಎಸಿ) ಹಾಗೂ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ (ಡಿಐಎಂಇ) ಸಮಿತಿಯನ್ನು ಜಿಲ್ಲಾ ಸಕ್ಷಮ ಪ್ರಾಧಿಕಾರಿ, ಪಿ.ಸಿ&ಪಿ.ಎನ್.ಡಿ.ಟಿ ಕಾಯ್ದೆ ಹಾಗೂ ಜಿಲ್ಲಾಧಿಕಾರಿಗಳ ಅನುಮೋದನೆಯಂತೆ 2024ರ ಜೂನ್ 13ರಂದು ಪುನರ್ ರಚಿಸಲಾಗಿದ್ದು, ಪಿ.ಸಿ & ಪಿ.ಎನ್.ಡಿ.ಟಿ ಜಿಲ್ಲಾ ಮಟ್ಟದ ಸಲಹಾ ಸಮಿತಿಗೆ ಅಧ್ಯಕ್ಷರನ್ನಾಗಿ ಮುನಿರಾಬಾದ್ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಡಾ ಕೆ.ಹೆಚ್.ತೊಗರಿ ಅವರನ್ನು ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರು ಹಾಗೂ ಮಕ್ಕಳ ತಜ್ಞರಾದ ಡಾ.ಗಿರೀಶ, ರೆಡಿಯಾಲಜಿಸ್ಟ್ ಡಾ.ದಯಾನಂದಸ್ವಾಮಿ, ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆಯ ಹರೀಶ್ ಜೋಗಿ, ವಕೀಲರಾದ ಶಂಕರ್ ಬಿಸರಳ್ಳಿ,ಪ ಎನ್.ಜಿ.ಓ.ಗಳ ಪ್ರತಿನಿಧಿಗಳಾದ ಡಾ ವಿಶ್ವನಾಥ ಬಸವರಾಜ ನಲ್ವಾಡ, ಶಂಕ್ರಪ್ಪ ಬಿ ಸುರಳ್, ರೇಷ್ಮಾ ಹಾಗೂ ಸಲೀಮಾ ಜಾನ್ ಸೇರಿದಂತೆ ಪಿ.ಸಿ & ಪಿ.ಎನ್.ಡಿ.ಟಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಹಾಗೂ ತಪಾಸಣಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

# ಪಟೇಲರಿಂದ ಅಧಿಕಾರ ಸ್ವೀಕಾರ



**ಕೊಪ್ಪಳ :** ನಗರಸಭೆಯ ನೂತನ ಅಧ್ಯಕ್ಷರಾಗಿ ಜಯ ಸಾಧಿಸಿದ ಅಮ್ಜದ್ ಪಟೇಲ್ ರವರು ಸೋಮವಾರ ಬೆಳಗ್ಗೆ ನಗರಸಭೆ ಕಾರ್ಯಾಲಯದಲ್ಲಿ ಅಧ್ಯಕ್ಷರ ಚೇಂಬರ್ ನಲ್ಲಿ ಅಧಿಕಾರ ಸ್ವೀಕರಿಸಿದರು. ನಗರ ಸಭೆ ಯವರು ಏರ್ಪಡಿಸಿದ ಸರಳ ಸಂಕೇತಿಕ ಪದ ಗ್ರಹಣ ಸಮಾರಂಭದಲ್ಲಿ ನೂತನ ಅಧ್ಯಕ್ಷರಾಗಿ ಅಮ್ಜದ್ ಪಟೇಲ್ ರವರು ಅಧಿಕಾರ ಸ್ವೀಕರಿಸಿದ್ದರು ನಂತರ ಸಾರ್ವಜನಿಕರು ಜನಪ್ರತಿನಿಧಿಗಳು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಅಧಿಕಾರಿ ವರ್ಗದವರು ನೂತನ ಅಧ್ಯಕ್ಷರಿಗೆ ಸನ್ಮಾನಿಸಿ ಅಭಿನಂದಿಸಿ ಶುಭ ಕೋರಿದರು ಸಂಸದ ಕೆ ರಾಜಶೇಖರ ಹಿಟ್ನಾಳ ಅವರುಸಹ ಭೇಟಿ ಮಾಡಿ ಶುಭ ಕೋರಿದರು.

# ಬೂತ್ ಮಟ್ಟದಿಂದ ಜೆಡಿಎಸ್ ಪಕ್ಷದ ಬಲವರ್ಧನೆಗೆ ಶ್ರಮಿಸಿ: ಮಾಜಿ ಶಾಸಕ ಡೊಂಗರಗಾಂವ

**ಅಥಣಿ :** ಸದಸ್ಯತ್ವ ಹೆಚ್ಚಳದಿಂದ ಪಕ್ಷ ಸಂಘಟನೆಗೆ ಬಲ ಬರುತ್ತದೆ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳಲ್ಲಿ ಪಕ್ಷವನ್ನು ಬಲ ಪಡಿಸುವ ನಿಟ್ಟಿನಲ್ಲಿ ಸದಸ್ಯತ್ವ ನೋಂದಣಿ ಅಭಿಯಾನವನ್ನು ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಪ್ರಾರಂಬಿಸಲಾಗಿದ್ದು ಸದ್ಯದಲ್ಲೇ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಬರಲಿದ್ದು, ಸದಸ್ಯತ್ವ ನೋಂದಣಿ ಕಾರ್ಯ ಚುರುಕಾಗಬೇಕು' ಎಂದು ಜೆಡಿಎಸ್ ರಾಜ್ಯ ಹಿರಿಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಸೂಚಿಸಿದರು.



ಅವರು ಬೆಳಗಾವಿಯಲ್ಲಿ ಜಿಲ್ಲಾ ಮಟ್ಟದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಉಸ್ತುವಾರಿಗಳಾಗಿ ಭಾಗವಹಿಸಿ ಮಾತನಾಡಿದರು ಜಿಲ್ಲಾ ಮಟ್ಟ. ತಾಲೂಕ ಮಟ್ಟ. ಹೋಬಳಿ ಮಟ್ಟ. ಬ್ಲಾಕ್ ಮಟ್ಟ ಹಾಗೂ ಬೂತ್ ಮಟ್ಟದ ಸಮಿತಿಗಳನ್ನು ರಚಿಸಲು ಕೈಗೊಳ್ಳಬೇಕಾದ ರೂಪುರೇಷೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಸದಸ್ಯರಾಗುವವರ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸದಸ್ಯತ್ವ ಶುಲ್ಕವನ್ನು ನೇರವಾಗಿ ಪಡೆದುಕೊಳ್ಳುವ ಕುರಿತು ವಿವರಿಸಿದರು.

ಪಕ್ಷವನ್ನು ಬೇರುಮಟ್ಟದಿಂದ ಬಲಪಡಿಸಲು ಹಾಗೂ ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಂಬರುವ ಚುನಾವಣೆಯಲ್ಲಿ ಆಯ್ಕೆಯಾಗುವಂತೆ ನೋಡಿಕೊಳ್ಳುವುದು ಬಿಜೆಪಿ ಜೊತೆ ಹೊಂದಾಣಿಕೆಯಂತೆ ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಹುಮತ ಪಡೆಯುವ ನಿಟ್ಟಿನಲ್ಲಿ ಶ್ರಮಿಸಬೇಕು. ಹಾಗೂ ಪಕ್ಷವನ್ನು ಸದೃಢಗೊಳಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲಾ ಉಸ್ತುವಾರಿಗಳಾದ ಅಲ್ಕೋಡ್ ಹನುಮಂತಪ್ಪ ಮಾತನಾಡಿ ಜೆಡಿಎಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಕಾರ್ಯಕ್ರಮಗಳನ್ನು ಹಾಗೂ ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ.

ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು ದೇಶಕ್ಕೆ ಮತ್ತು ರಾಜ್ಯಕ್ಕೆ ನೀಡಿದ ಕೊಡುಗೆಯನ್ನುಜನರಿಗೆತಲುಪಿಸುವಕೆಲಸ ಮಾಡಬೇಕು ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

# ಕೊಪ್ಪಳ ಜಿಲ್ಲಾ ಉತ್ಸವ ಯಶಸ್ವಿಗೆ ಸಹಕರಿಸಿದ ಪೊಲೀಸರಿಗೆ ಸನ್ಮಾನ





**ಕೊಪ್ಪಳ :** ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳ ಜಿಲ್ಲಾ ಉತ್ಸವ ದ ಸಾಂಸ್ಕೃತಿಕ ಹಾಗೂ ಜಿಲ್ಲಾ ಉತ್ಸವ ಯಶಸ್ವಿಗೆ ಸಹಕರಿಸಿದ ಪೊಲೀಸ್ ಸಿಬ್ಬಂದಿಗಳಿಗೆ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ಪರವಾಗಿ ಸನ್ಮಾನಿಸಲಾಯಿತು. ನಗರ ಪೊಲೀಸ್ ಠಾಣೆಯ ಜಮಾದಾರ್ ರಾಮಪ್ಪ ಮಡಿವಾಳರ್, ಮಹಿಳಾ ಪೊಲೀಸ್ ಕಾನ್ಸೇಬಲ್ ಗಳಾದ ಜಯಶ್ರೀ ಮತ್ತು ಕೊಟ್ರಮ್ಮ ಎ ರವರುಗಳಿಗೆ ಮೂಮೆಂಟಮ್ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ನ್ಯಾಯವಾದಿ ಎ ವಿ ಕಣಿವಿ, ಸಮ್ಮೇಳನ ಅಧ್ಯಕ್ಷರಾದ ಶ್ರೀನಿವಾಸ್ ಚಿತ್ರಗಾರ, ರಾಮು ಪೂಜಾರ್ ಸಂಘಟಕರಾದ ಮಹೇಶ್ ಬಾಬು ಸರ್ವೆ ಜಿಎಸ್ ಗೋನಾಳ ಎಂಬಿ ಅಳವಂಡಿ ಮತ್ತು ಎಮ್ ಸಾಧಿಕ್ ಅಲಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಶ್ರೀ ಮಹಾದುರ್ಗಾದೇವಿಗೆ ಸಹಸ್ರ ಕಳಸಾಭಿಷೇಕ ಮತ್ತು ಶತಚಂಡಿಕಾ ಪೂಜೆ

**ಚನ್ನಮ್ಮನ ಕಿತ್ತೂರು :** ಸಾರ್ವಜನಿಕರೆಲ್ಲರೂ ಸೇರಿ ಒಗ್ಗಟಿನಿಂದ ಸೇವಾ ಮನೋಭಾವನೆಯಿಂದ ಸೇವೆ ಮಾಡಿದರೆ ಯಾವೆಲ್ಲಾ ಕೆಲಸದಲ್ಲಿಯೂ ಯಶಸ್ಸು ಕಾಣಲು ದೇವರು ಆರ್ಶೀವಾದ ಮಾಡುತ್ತಾನೆಂದು ಡೊಂಬರಕೊಪ್ಪದ (ದೇವಿಪುರ) ದುರ್ಗಾದೇವಿ ದೇವಸ್ಥಾನದ ಸ್ವಾಮಿಜಿ ಶ್ರೀ ಶಿವಲಿಂಗೇಶ್ವರ ಸ್ವಾಮಿಜೀ (ಅಪ್ಪಾಜಿ) ಹೇಳಿದರು.



ತಾಲೂಕಿನ ನಿಚ್ಚಣಕಿ ಗ್ರಾಪಂ ವ್ಯಾಪ್ತಿಯ ಡೊಂಬರಕೊಪ್ಪ (ದೇವಿಪುರ) ಗ್ರಾಮದ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ದೇವಿ ಚೈತನ್ಯ ಅಭಿವೃದ್ಧಿ, ವಿಶ್ವಶಾಂತಿ ಲೋಕಕಲ್ಯಾಣಕ್ಕಾಗಿ ಶ್ರೀ ಮಹಾದುರ್ಗಾದೇವಿಗೆ ಸಹಸ್ರ ಕಳಸಾಭಿಷೇಕ ಮತ್ತು ಶತಚಂಡಿಕಾ ಹೋಮ, ಶ್ರೀಚಕ್ರ ಪೂಜೆಯಲ್ಲಿ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಈ ಹೋಮದಿಂದ ಚೈತನ್ಯ ವೃದ್ಧಿಸುತ್ತದೆ. ಹೋಮದ ಬೆಂಕಿ ಮತ್ತು ಹೊಗೆಯು ನಮ್ಮ ಸುತ್ತಲಿನ ನಕಾರಾತ್ಮಕ ಶಕ್ತಿಯನ್ನು ಕಡಿಮೆ ಮಾಡುತ್ತದೆ ಮತ್ತು ಜೀವನದಲ್ಲಿ ಸಂತೋಷವನ್ನುಂಟು ಮಾಡಿ ಕಷ್ಟಗಳನ್ನು ಮಾಯ ಮಾಡುತ್ತದೆ ಎಂಬ ನಂಬಿಕೆಯಿದೆ ಎಂದರು.

ಕೇರಳ ರಾಜ್ಯದ ಕಾಸರಗೋಡಿನ ಬೇಕಲ ಗೋಕುಲಂ ಗೋಶಾಲೆ ಸಂಸ್ಥಾಪಕ ಖ್ಯಾತ ಜೋತಿಷಿ ಶ್ರೀ ವಿಷ್ಣುಪ್ರಸಾದ ಹೆಬ್ಬಾರ್ ಇವರು ಕಾರ್ಯಕ್ರಮ ಮುಖ್ಯ ಅತಿಥಿಗಳಾಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹೆಬ್ಬಾರ್ ನೇತೃತ್ವದಲ್ಲಿ 35 ವೈದಿಕರ ತಂಡದಿಂದ 9 ದಿನ ಧಾರ್ಮಿಕ ವಿಧಿವಿಧಾನಗಳ ಮತ್ತು ವಾದ್ಯಮೇಳದೊಂದಿಗೆ ಪೂಜೆ, ಭಜನೆ, ಕೀರ್ತನೆ, ನೃತ್ಯ ನೇರವೇರಿದವು. ಪ್ರತಿನಿತ್ಯ ಹೋಮಕ್ಕೆ ದೇಸಿ ಗೋವಿನ ತುಪ್ಪ ಪ್ರಕೃತಿಯಲ್ಲಿ ದೊರೆಯುವ ನೈಸರ್ಗಿಕ ವಸ್ತುಗಳನ್ನು ಹೋಮದಲ್ಲಿ ಬಳಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅರ್ಚಕ ರಾಚಪ್ಪಾ ಹೊಸಮನಿ, ಶಾಸಕ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕರುಗಳಾದ ವಿ.ಆಯ್.ಪಾಟೀಲ, ಮಾಹಾಂತೇಶ ದೊಡ್ಡಗೌಡರ, ಬಿಜೆಪಿ ಮುಖಂಡೆ ಲಕ್ಷ್ಮೀ ಇನಾಮದಾರ, ಉದ್ಯಮಿ ವಿಕ್ರಮ್ ಇನಾಮದಾರ, ಕೆಪಿಸಿಸಿ ಸದಸ್ಯೆ ರೋಹಿನಿ ಪಾಟೀಲ, ಬಿಜೆಪಿ ಮಂಡಳ ಅಧ್ಯಕ್ಷ ಬಸವರಾಜ ಪರವಣ್ಣವರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಗನಗೌಡ ಪಾಟೀಲ, ನಿಂಗನಗೌಡ ಪಾಟೀಲ, ಮಹಾಂತೇಶ ಪಾಶ್ಚಾಪೂರ, ಮಂಜುಳಾ ಮಹಾಂತೇಶ ದೊಡ್ಡಗೌಡರ, ನಾನಾಸಾಹೇಬ ಪಾಟೀಲ, ಮುದಕಪ್ಪ ಮರಡಿ, ಅಸ್ಫಾಕ ಹವಾಲ್ದಾರ, ಈಶ್ವರ ಹುಂಟಿ, ಗ್ರಾಪಂ ಪಿಡಿಓ, ಅಧ್ಯಕ್ಷ,ಉಪಾಧ್ಯಕ್ಷ, ಸರ್ವಸದಸ್ಯರು, ಕಾರ್ಯದರ್ಶಿ, ಸಿಬ್ಬಂದಿ, ಕಿತ್ತೂರು ಪಪಂ ಸದಸ್ಯರುಪಾಲ್ಗೊಂಡಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸೇವೆ ಶ್ಲಾಘನೀಯ



**ಅಥಣಿ :** ಮಹಿಳಾ ಸಬಲೀಕರಣಕ್ಕೆ ಶ್ರಮಿಸುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಸೇವಾ ಕಾರ್ಯಗಳು ಶ್ಲಾಘನೀಯ.

ಅಥಣಿ ತಾಲ್ಲೂಕಿನ ಮಧಬಾವಿ ವಲಯದ ಅಬ್ಬಿಹಾಳ ಕಾರ್ಯಕ್ಷೇತ್ರದ ತಾಂವಶಿ ಗ್ರಾಮದ ಮಲ್ಲಿಕಾರ್ಜುನ್ ದೇವಸ್ಥಾನ ಜಿರ್ಣೋದ್ಧಾರಕ್ಕೆ ಡಾ. ವೀರೇಂದ್ರ ಹೆಗಡೆ ಅವರು ಮಂಜೂರಾತಿ ನೀಡಿರುವ 1.50.000 (ಒಂದು ಲಕ್ಷ ಐವತ್ತು ಸಾವಿರ ರೂ.ಗಳು) ಡಿ ಡಿ ಯನ್ನು ತಾಲೂಕಾ ಯೋಜನಾಧಿಕಾರಿ ಸಂಜೀವ ಮರಾಠಿ, ವಿತರಿಸಿದರು. ಡಿ.ಡಿ ವಿತರಣಾ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ದೇವಸ್ಥಾನ ಕಮಿಟಿಯ ಸದಸ್ಯರು ಗ್ರಾಮದ ಗುರು ಹಿರಿಯರು ಗಣ್ಯರು ಸೇರಿದಂತೆ ಮೇಲ್ವಿಚಾರಕ ಸಂತೋಷ ಗಂದಿಗವಾಡ ಸ್ವಸಹಾಯ ಸಂಘದ ಸದಸ್ಯರು ಸೇವಾ ಪ್ರತಿನಿಧಿ ಅವರು ಉಪಸ್ಥಿತರಿದ್ದರು.

# ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಕೊಪ್ಪಳ :** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಸೌಲಭ್ಯಕ್ಕಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ ಅರೆ ಅಲೆಮಾರಿ ವಿದ್ಯಾರ್ಥಿಗಳು ವೆಬ್ಸೈಟ್ https://ssp.postmatric.karnataka.gov.in ಆನ್‌ಲೈನ್ ಮೂಲಕ ಸೆಪ್ಟೆಂಬರ್ 15ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ಭೇಟಿ ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ: 8050770005, ಇ-ಮೇಲ್ bcwdhelpline@gmail.com, ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಸಹಾಯವಾಣಿ ಇ-ಮೇಲ್ postmatrichelp@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-35254757 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಳ್ಳ ಸಾಗಾಣಿಕೆ & ವಾಣಿಜ್ಯ ಲೈಂಗಿಕ ಶೋಷಣೆಯ ಬಲಿಪಶುಗಳ ಯೋಜನೆ: ಜಾಗೃತಿ ಕಾರ್ಯಕ್ರಮ

**ಕೊಪ್ಪಳ:** ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣ ಘಟಕ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕೊಪ್ಪಳ ಇವರ ಸಂಯುಕ್ತಾಶ್ರದಲ್ಲಿ ಬುಧವಾರದಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕೊಪ್ಪಳದಲ್ಲಿ ರಾಷ್ಟ್ರೀಯ ಕಾನೂನು ಪ್ರಾಧಿಕಾರದಿಂದ ಅನುಷ್ಠಾನದಲ್ಲಿರುವ ಕಳ್ಳ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ಶೋಷಣೆಯ ಬಳಿಪಶುಗಳ ಯೋಜನೆ-2015ರ ಕುರಿತು ಜಾಗೃತಿ ಕಾರ್ಯಕ್ರಮ ನೆಡೆಯಿತು.



ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಸಂಗಪ್ಪದರಗದಅವರುಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭಾರತ ದೇಶದಲ್ಲಿ ಸ್ವತಂತ್ರ್ಯ ಸಿಕ್ಕು 78ವರ್ಷಗಳಾದರೂ ಸಹ ಹೆಣ್ಣುಮಕ್ಕಳಿಗೆ ಯಾವುದೇ ರೀತಿ ರಕ್ಷಣೆ ಇಲ್ಲ. ದಿನನಿತ್ಯ ನಾವು ಸುದ್ದಿ ಮಾಧ್ಯಮದಲ್ಲಿ ನೋಡುತ್ತಿರುವ ಹಾಗೇ ದಿನದಿಂದ ದಿನಕ್ಕೆ ಅತ್ಯಚಾರ, ಕೊಲೆ ಪ್ರಕರಣಗಳು ಹೆಚ್ಚಾಗುತ್ತಿದ್ದು ಹಾಗೂ ಮಕ್ಕಳ ಕಳ್ಳ ಸಾಗಾಣಿಕೆಯೂ ಹೆಚ್ಚುತ್ತಿವೆ, ಆದ್ದರಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ಮಕ್ಕಳು ಮತ್ತು ಜನರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ತಿಳಿಸಿದರು. ಜಿಲ್ಲಾ ವಕೀಲರ ಸಂಘಂದ ಅಧ್ಯಕ್ಷರಾದ ಎ.ವಿ. ಕಣವಿ ಅವರು ಮಾತನಾಡಿ ಮಹಿಳೆಯರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ನೀಡಬೇಕು. ಬಡತನ ಸ್ಥಿತಿಯಲ್ಲಿರುವ ಕುಟುಂಬಗಳನ್ನು ದುಡ್ಡಿನ ಆಶೆ ತೋರಿಸಿ ಮಕ್ಕಳನ್ನು ಸಾಗಾಣಿಕೆ ಮಾಡುತ್ತಾರೆ ಇದಕ್ಕಾಗಿ ಎಲ್ಲಾರೂ ತಮ್ಮ ತಮ್ಮ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ(ಪ್ರ) ಗಂಗಪ್ಪ ಅವರು ಮಾತನಾಡಿ, ಭಾರತದಲ್ಲಿ ಮಹಿಳೆಯರಿಗೆ ಅತಿ ಹೆಚ್ಚು ಕಾನೂನುಗಳಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಶರಣಬಸವ ಸಜ್ಜನ್, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಶಿವಾನಂದ, ಕೊಪ್ಪಳ ಉಪ ವಿಭಾಗದ ಪೋಲೀಸ್ ಉಪಾಧೀಕ್ಷಕರಾದ ಮುತ್ತಣ್ಣ ಸರವಗೋಳ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಹಾಂತಸ್ವಾಮಿ ಪೂಜಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ರೋಹಿಣಿ ಕೊಟಗಾರ, ವಕೀಲರಾದ ಹನುಮಂತ ರಾವ್ ಕೆ ಲ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಡಿಎಡ್ ಮೂರನೇ ಸೆಮಿಷ್ಟರಿ ಫಲಿತಾಂಶ ದಾನಿಗೊಂಡ ಕಾಲೇಜ್ ನೂರಕ್ಕೆ ನೂರು







**ತೇರದಾಳ :** ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ ಶಿಕ್ಷಣ ಮಹಾವಿದ್ಯಾಲಯದ ಮೂರನೇ ಸೆಮಿಷ್ಟರಿ ಪರೀಕ್ಷೆ ಫಲಿತಾಂಶ ಪ್ರಕಟಗೊಳಿಸಿದ್ದು, ಇಲ್ಲಿನ ದಾನಿಗೊಂಡ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 99 ಪ್ರಶಿಕ್ಷಣಾರ್ಥಿಗಳ ಪೈಕಿ 96 ಉತ್ತೀರ್ಣ ಹಾಗೂ ಮೂವರು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಾಣಿಶ್ರೀ ಕೋನೆ ಪ್ರಥಮ, ರಹೀನಾ ತೇರದಾಳ ದ್ವಿತೀಯ ಹಾಗೂ ನಿಕಿತಾ ಸುರನ್ನವರ ತೃತೀಯ ಸ್ಥಾನ ಪಡೆದಿದ್ದಾರೆಂದು ಕಾಲೇಜಿನ ಪ್ರಾಚಾರ್ಯ ಡಾ. ಎಂ.ಆರ್. ಪಾಟೀಲ ತಿಳಿಸಿದ್ದಾರೆ.

# ಪಟ್ಟಣ ಪಂಚಾಯತಿ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ





**ನಿಡಗುಂದಿ :** ನಿಡಗುಂದಿ ಪಟ್ಟಣದ ಪಟ್ಟಣ ಪಂಚಾಯತಿಯ ನೂತನ ಅಧ್ಯಕ್ಷರಾಗಿ ದೇಸಾಯಿ ಜಂಬಕ್ಕ ಲಕ್ಷ್ಮಣ ವಿಭೂತಿ, ಉಪಾಧ್ಯಕ್ಷರಾಗಿ ಗೌರಮ್ಮ ನಾರಾಯಣಹುಗ್ಗಿ ಆಯ್ಕೆಯಾದರು. ಈಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತಿ ಮುಂಭಾಗದ ಆವರಣದಲ್ಲಿ ಮುಖಂಡರು,ಬೆಂಬಲಿಗರು,ಸೇರಿ ಒಬ್ಬರಿಗೊಬ್ಬರು ಗುಲಾಲ್ ಎರಚಿ ಮತ್ತು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವವನ್ನು ಆಚರಿಸಿದರು.

# ದೈಹಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ವಿಕಾಸವಾದಾಗ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗುತ್ತದೆ: ಸಾಹಿತಿ ಎಂ.ಸಿ. ಯಾಳವಾರ



**ಬೀಳಗಿ :** ಕಲಿಕಾರ್ಥಿಗಳು ಕಲಿಕಾ ಯೋಗಿಗಳಾಗಬೇಕು. ಬೋಧಕರು ಬೋಧನಾ ಯೋಗಿಗಳಾಗಬೇಕು. ಕಲಿಕಾ ಯೋಗಿಗಳ, ಬೋಧನಾ ಯೋಗಿಗಳ ಸಮ್ಮಿಲನದಿಂದ ಶಿಕ್ಷಣದ ಗುಣಮಟ್ಟ ಹೆಚ್ಚಾಗಲು ಸಾಧ್ಯ. ದೈಹಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ವಿಕಾಸವಾದಾಗ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗುತ್ತದೆ ಎಂದು ಸಾಹಿತಿ ಎಂ. ಸಿ. ಯಾಳವಾರ ಹೇಳಿದರು.

ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯಾರ್ಥಿಗಳು, ಉಪನ್ಯಾಸಕರು ಸಮಯಪಾಲನೆ ಮಾಡಬೇಕು. ವಿದ್ಯಾರ್ಥಿಗಳಿಗೆ ಸಮವಸ್ತ್ರ ಇದ್ದಂತೆ, ಬೋಧಕರಿಗೂ ಸಮವಸ್ತ್ರ ಇರಬೇಕೆಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಅಧ್ಯಯನಶೀಲರಾಗಿ ಮನನ ಮಾಡಿಕೊಳ್ಳಬೇಕು. ಗುರಿ ಮುಟ್ಟಬೇಕೆಂಬ ದೃಢ ಸಂಕಲ್ಪದಿಂದ ಓದಬೇಕು. ಪಾಠದ ಅರಿವು ಆಗುವವರೆಗೆ ಓದಿದಾಗ ಮನನವಾಗುತ್ತದೆ. ಭೌತಿಕ ಶಿಸ್ತನ್ನು ಕಾಪಾಡಿದರೆ ಅದು ಆಂತರಿಕ ಶಿಸ್ತಿಗೆ ಒಳಪಡಿಸುತ್ತದೆ ಎಂದರು.

ದೇಶದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಬದಲಾವಣೆಗಳಾಗಿವೆ. ಆದರೆ ಆರೋಗ್ಯಕರ ಬದಲಾವಣೆಯಾಗಿಲ್ಲ. ಬಸವಣ್ಣನವರ ಸಪ್ತಸೂತ್ರಗಳನ್ನು ಪ್ರತಿಯೊಬ್ಬರೂ ಅನುಸರಿಸಿ ನಡೆದಿದ್ದರೆ ಪೊಲೀಸರು, ಸೈನಿಕರ ಅಗತ್ಯವಿರಲಿಲ್ಲ. ವೇದಿಕೆ ಮೇಲೆ ಹೇಳುವುದು ಸುಲಭ, ಆದರೆ ಅನುಸರಿಸುತ್ತಿಲ್ಲವೆಂದು ವಿಷಾಧಿಸಿದರು.

ಒಳ್ಳೆಯ ಸಂಸ್ಕಾರವಂತರಾಗಿ, ಸಂಸ್ಕೃತಿಯನ್ನು ಬೆಳೆಸಿಕೊಂಡು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಬೋಧಕರ ಮಾರ್ಗದರ್ಶನದಲ್ಲಿ ಒಳ್ಳೆಯ ರೀತಿಯಿಂದ ಕಲಿತು ಬದುಕು ಶ್ರೇಯಸ್ಕರವಾಗಲೆಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಬಾಗಲಕೋಟೆ ಬಿವಿವಿ ಸಂಘದ ಸದಸ್ಯ ರವೀಂದ್ರ ಸಾವಳಗಿಮಠ, ಪ್ರಾಂಶುಪಾಲ ವೈ. ಎಸ್. ರೂಗಿ, ಉಪನ್ಯಾಸಕ ಡಾ. ಸಿದ್ಧರಾಮ ಬಂಗಾರಿ, ಕಜಾಪ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿದರು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಾಬು ಕೆಂಪಲಿಂಗಣ್ಣವರ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಪ್ರಾಚಾರ್ಯ ಎಸ್. ಎಸ್. ಯರನಾಳ, ಪಿಕೆಪಿಎಸ್ ಮಾಜಿ ಅಧ್ಯಕ್ಷ ಮಲ್ಲು ಹೋಳಿ, ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎಸ್. ಸಿ. ಕರಿಸಯಪ್ಪನವರ, ಅತಿಥಿ ಉಪನ್ಯಾಸಕರಾದ ರಂಗನಾಥ ಗುಡಿಮನಿ, ಅರುಣ ಖಾನಾಪೂರ, ಮಂಜುನಾಥ ದೊರನ್ನವರ, ಐ. ಎಲ್. ರಾಮದುರ್ಗ ಉಪಸ್ಥಿತರಿದ್ದರು.

# ಆಸ್ತಿ ತೆರಿಗೆ ರಿಯಾಯ್ತಿ: ಅವಧಿ ವಿಸ್ತರಣೆ



**ರಬಕವಿ-ಬನಹಟ್ಟಿ :** ನಗರಸಭೆಯ ಸ್ವಯಂ ಘೋಷಿತ ಆಸ್ತಿ ತೆರಿಗೆ ತುಂಬುವ ಕಾರ್ಯಕ್ಕೆ ಸಪ್ಟೆಂಬರ 14 ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ಈಗಾಗಲೇ ಶೇ. 70 ರಷ್ಟು ಆಸ್ತಿ ತೆರಿಗೆದಾರರು ಇದರ ಲಾಭ ಪಡೆದಿದ್ದು, ಇನ್ನಷ್ಟು ಜನರಿಗೆ ಅವಕಾಶವಾಗುವ ದಿಶೆಯಲ್ಲಿ ಅವಧಿ ವಿಸ್ತರಣೆಗೆ ಸರ್ಕಾರದಿಂದ ಅನುಮತಿಸಲಾಗಿದೆ ಎಂದರು.

ಶೇ. ಐದರಷ್ಟು ರಿಯಾಯ್ತಿಯ ಯೋಜನೆಯನ್ನು ಪ್ರತಿಯೊಬ್ಬ ತೆರಿಗೆದಾರರು ಲಾಭ ಪಡೆಯುವ ಉದ್ದೇಶದಿಂದ ಈ ಬಾರಿ ವಿಶೇಷವಾಗಿ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಈಟಿ ತಿಳಿಸಿದರು.

# ಅಲ್ಲಮಪ್ರಭು ನೂತನ ದೇವಸ್ಥಾನ ಚೌಕಟ್ಟು ಬಾಗಿಲಿಗೆ ನಾಡಗೌಡರಿಂದ 26 ಹಾಗೂ ಆಸಂಗಿ ಅವರಿಂದ 46 ಕೆಜಿ ಬೆಳ್ಳಿ





**ತೇರದಾಳ :** ದೀಪಾವಳಿಗೆ ಲೋಕಾರ್ಪಣೆಗೊಳ್ಳಲಿರುವ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ದೇವಸ್ಥಾನದ ಚೌಕಟ್ಟಿಗೆ ಬನಹಟ್ಟಿಯ ಭಾರತಿ ರುದ್ರಪ್ಪ ಆಸಂಗಿ 47 ಕೆಜಿ ಹಾಗೂ ಬಾಗಿಲಿಗೆ ಇಲ್ಲಿನ ಜಯಶ್ರೀ ಪಾರ್ಶ್ವನಾಥ ನಾಡಗೌಡ ಕುಟುಂಬದವರು 26 ಕೆಜಿ ಬೆಳ್ಳಿಯನ್ನು ದೇವಸ್ಥಾನದ ಜಿರ್ಣೋದ್ಧಾರ ಸಮಿತಿ, ಅರ್ಚಕವೃಂದ ಹಾಗೂ ನೂರಾರು ಭಕ್ತರ ಸಮ್ಮುಖದಲ್ಲಿ ಶುಕ್ರವಾರ ಸಮರ್ಪಿಸಿದರು. ಕಾರ್ಯಕ್ರಮ ನಿಮಿತ್ತ ದೇವಸ್ಥಾನದಲ್ಲಿ ಅರ್ಚಕ ಪರಯ್ಯ ತೆಳಗಿನಮನಿ ಅವರಿಂದ ಪ್ರಭುದೇವರ ಗದ್ದುಗೆಗೆ ವಿಶೇಷ ಪೂಜೆ, ಹಾಗೂ ದೇಣಿಗೆ ನೀಡದವರಿಂದ ಆರುತಿ ಮಂಗಳಾರುತಿ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಮಾತನಾಡಿದ ಹಿರೇಮಠದ ಗಂಗಾಧರ ದೇವರು, 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣ ನಿರ್ಮಿಸಿದ ಅನುಭವ ಮಂಟಪದ ಪೀಠಾಧ್ಯಕ್ಷ ಅಲ್ಲಮಪ್ರಭುದೇವರು ನಮ್ಮೂರಿನ ಕ್ಷೇತ್ರಾಧಿಪತಿ ಆಗಿರುವುದು ನಮ್ಮೆಲ್ಲರ ಪುಣ್ಯ. ಅಂತಹ ಸತ್ಪುರ್ಶರ ನೂತನ ದೇವಸ್ಥಾನ ಪೂರ್ಣಗೊಳ್ಳುತ್ತಿರುವುದು ಐತಿಹಾಸಿಕ ಇತಿಹಾಸವಾಗಿದೆ ಎಂದು ಬಣ್ಣಿಸಿದರು. ಪ್ರವೀಣ ನಾಡಗೌಡ ಮಾತನಾಡಿ, ಅಲ್ಲಮಪ್ರಭುದೇವರ ಶಕ್ತಿ ಪವಾಡ ಹೇಳತೀರದು. ದೇವರಿಗೆ ದೇಣಿಗೆ ನೀಡುವಷ್ಟು ದೊಡ್ಡವರು ಯಾರು ಇಲ್ಲ. ನಮಗಿಂತ ಮೊದಲು ಪಟ್ಟಣದ ಹಿರಿಯ ಜೀವಿ ಮಲ್ಲಪ್ಪಣ್ಣ ಜಮಖಂಡಿ ಹಾಗೂ ತರಕಾರಿ ಮಾರುವ ಚಂದ್ರವ್ವ ಜಗದಾಳ ಕೂಡ ಗರ್ಭ ಗುಡಿಗೆ ಬೆಳ್ಳಿಗೆ ಚೌಕಟ್ಟು ಹಾಗೂ ಬಾಗಿಲು ದೇಣಿಗೆ ನೀಡಿದ್ದಾರೆ. ದಾನ ಮಾಡುವುದರಲ್ಲಿನ ತೃಪ್ತಿ ಬಹಳ ದೊಡ್ಡದು ಎಂದು ಬಣ್ಣಿಸಿದರು.

ಚಿತ್ರದುರ್ಗ ಜಿಲ್ಲೆಯ ಯಲಗೂರ ಕಲಾವಿದರ ಕೈಚಳಕದಲ್ಲಿ ನಿರ್ಮಾಣಗೊಂಡಿರುವ ಬೆಳ್ಳಿ ಚೌಕಟ್ಟು ಹಾಗೂ ಬೆಳ್ಳಿ ಬಾಗಿಲು ಅತ್ಯಾಕರ್ಷಣೆಯಿಂದ ಕೂಡಿದ್ದು, ಭಕ್ತರ ಕಣ್ಮನ ಸೆಳೆಯುತ್ತಿವೆ. ಗುಹೇಶ್ವರ ಪುರಾಣಿಕಮಠ, ವಿಜಯಮಹಾಂತೇಶ ನಾಡಗೌಡ, ಭೀಮಗೊಂಡ ಸದಲಗಿ, ಅಲ್ಲಯ್ಯ ದೊಡಮನಿ, ಸುನೀಲ ತೆಳಗಿನಮನಿ, ಮಲ್ಲಪ್ಪಣ್ಣ ಜಮಖಂಡಿ, ಈಶ್ವರ ಯಲ್ಲಟ್ಟಿ, ಶಂಕರ ಅಥಣಿ, ವರ್ಧಮಾನ ಕಡಹಟ್ಟಿ, ಶೇಖರ ಸಲಬನ್ನವರ, ಸತ್ಯಪ್ಪ ಮುಕುಂದ, ಗಿರೀಶ, ಶಿವಾನಂದ ವಾಲಿ, ಮಹಾದೇವ ಬಿಜ್ಜರಗಿ, ಗುಹೇಶ್ವರ ಬಾವಿ, ಆನಂದ ಹಿತ್ತಲಮನಿ, ಮಹಾವೀರ ಮಗದುಂ, ಮೃತ್ಯುಂಜಯ ತೆಳಗಿನಮನಿ, ಎಂ.ಸಿ. ಕುಂಚಕನೂರ, ಪ್ರಕಾಶ ಕಾಲತಿಪ್ಪಿ, ನುಚ್ಚಿ ಸೇರಿದಂತೆ ಮತ್ತಿತರಿದ್ದರು.

## ಅಧ್ಯಕ್ಷ-ಉಪಾಧ್ಯಕ್ಷರ ಅಧಿಕಾರ ಸ್ವೀಕಾರ

# ಮಹಾಲಿಂಗಪುರ ಪಟ್ಟಣದ ಅಭಿವೃದ್ಧಿಗೆ ಆದ್ಯತೆ: ಯಲ್ಲನಗೌಡ ಪಾಟೀಲ



**ಮಹಾಲಿಂಗಪುರ :** ಪುರಸಭೆಯ ಎಲ್ಲ ಸದಸ್ಯರನ್ನು ಜೊತೆಜೊತೆಗೆ ಕರೆದುಕೊಂಡು ಮಹಾಲಿಂಗಪುರ ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವದು ಎಂದು ಪುರಸಭೆಯ ನೂತನ ಅಧ್ಯಕ್ಷ ಯಲ್ಲನಗೌಡ ಪಾಟೀಲ ಹೇಳಿದರು.

ಶುಕ್ರವಾರ ಪುರಸಭೆಯಲ್ಲಿ ಅಧ್ಯಕ್ಷರ ಕೊಠಡಿಯಲ್ಲಿ ಹಮ್ಮಿಕೊಂಡಿದ್ದ ಪೂಜಾ ಸಮಾರಂಭದಲ್ಲಿಭಾಗವಹಿಸಿ,ಪುರಸಭೆಯ ಅಧ್ಯಕ್ಷ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು ಮುಂದಿನ 15 ತಿಂಗಳ ಅವಧಿಯಲ್ಲಿ ಪಟ್ಟಣಕ್ಕೆ ಅವಶ್ಯವಿರುವ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ನನಗೆ ಬೆಂಬಲಿಸಿದ 12 ಸದಸ್ಯರುಹಾಗೂಬಿಜೆಪಿಯ10ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣದಲ್ಲಿನ ಮೂಲಭೂತ ಕೆಲಸಗಳ ಜೊತೆಗೆ ಕೆಲವು ಮಹತ್ವಪೂರ್ಣ ಕೆಲಸಗಳಿಗಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿಯಾಗಿ, ಸರ್ಕಾರದಿಂದ ವಿಶೇಷ ಅನುದಾನ ತಂದು ಮಹಾಲಿಂಗಪುರ ಪುರಸಭೆಯಿಂದ ಮಾದರಿ ಕಾರ್ಯಗಳನ್ನು ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಉಪಾಧ್ಯಕ್ಷ ಕೊಠಡಿಯಲ್ಲಿಯೂ ಪುರಸಭೆಯ ನೂತನ ಉಪಾಧ್ಯಕ್ಷೆ ಶ್ರೀಮತಿ ಶೀಲಾ ರಾಜೇಶ ಭಾವಿಕಟ್ಟಿ ಪೂಜೆ ಸಲ್ಲಿಸಿ, ಉಪಾಧ್ಯಕ್ಷಸ್ಥಾನದ ಅಧಿಕಾರ ಸ್ವೀಕರಿಸಿದರು. ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಹಾಗೂ ಅಕಾರಿಗಳ ವರ್ಗದವರು,ಸದಸ್ಯರು ನೂತನ ಅಧ್ಯಕ್ಷ ಉಪಾಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಿದರು.

ಪುರಸಭೆ ಸದಸ್ಯರಾದ ಮುಸ್ತಾಕ ಚಿಕ್ಕೋಡಿ, ಬಲವಂತಗೌಡ ಪಾಟೀಲ, ಅಬ್ದುಲ್‌ರಜಾಕ್ ಬಾಗವಾನ, ಬಸವರಾಜ ಬುರುಡ, ರಾಜು ಗೌಡಪ್ಪಗೋಳ, ಸಜನಸಾಬ ಪೆಂಡಾರಿ, ಶ್ರೀಮತಿ ಭಾವನಾ ಪಾಟೀಲ, ಗೋದಾವರಿ ಭಾಟ, ಚಾಂದನಿ ನಾಯಕ, ಕಾಂಗ್ರೆಸ್ ಮುಖಂಡರಾದ ಮಹಾಲಿಂಗಪ್ಪ ತಟ್ಟಿಮನಿ, ವಿಜುಗೌಡ ಪಾಟೀಲ, ಬಸವರಾಜ ರಾಯರ, ಮಹಾದೇವ ಮೇಟಿ, ಪ್ರಕಾಶ ಮಮದಾಪೂರ, ಈಶ್ವರ ಚಮಕೇರಿ, ಮಲ್ಲಪ್ಪ ಭಾವಿಕಟ್ಟಿ, ನಜೀರ ಜಾರೆ, ನಿಂಗಪ್ಪ ಬಾಳಿಕಾಯಿ, ಅಶೋಕ ಅಂಗಡಿ, ಪ್ರವೀಣ ಪಾಟೀಲ, ಶ್ರೀಶೈಲ ದೊಡಮನಿ, ಶೆಟ್ಟೆಪ್ಪ ಕೆಳಗಡೆ, ಆನಂದ ಬಂಡಿ, ಬಸವರಾಜ ಕರೆಹೊನ್ನ, ಪ್ರಭು ಬೆಳಗಲಿ, ಹೊಳೆಪ್ಪ ಬಾಡಗಿ, ಸೇರಿದಂತೆ ಹಲವರು ಪೂಜಾ ಸಮಾರಂಭದಲ್ಲಿ ಭಾಗವಹಿಸಿದ್ದರು.

# ಕಾನೂನು ಪಾಲಿಸುವವರನ್ನು ನಾವು ಗೌರವಿಸುತ್ತೇವೆ: ಸಿಪಿಐ ತುಳಸಿಗೇರಿ

ವರದಿ : ಲಾಲಸಾಬ ಸವಾರಗೋಳ



**ತಾಳಿಕೋಟೆ :** ಯಾವುದೇ ಹಬ್ಬ ಹರಿದಿನಗಳಾಗಲಿ ಆಯಾ ಕೋಮುಗಳಿಗೆ ಸಂಬಂದಿತವಾಗಿದ್ದರೂ ಅವುಗಳು ನಮಗೆ ಒಳ್ಳೆಯ ನೀತಿ ಪಾಠಗಳನ್ನು ಕಲಿಸುತ್ತಾ ಬಂದಿವೆ. ಆ ಹಬ್ಬಗಳ ಆಶಯದಂತೆ ನಡೆ ನುಡಿಗಳಿಂದ ಅವುಗಳ ಆದರ್ಶಗಳನ್ನು ಪಾಲನೆ ಮಾಡುತ್ತಾ ಸಾಗಿದರೆ ಅದಕ್ಕೆ ಮಹತ್ವದ ಬರುತ್ತದೆಎಂದುಮುದ್ದೇಬಿಹಾಳ ಸರ್ಕಲ್ ಪೊಲೀಸ್ ಇನ್ಸಪೆಕ್ಟರ್ರಾದ ಮಲ್ಲಿಕಾರ್ಜುನ ತುಳಸಿಗೇರಿ ಹೇಳಿದರು.

ಬುಧವಾರರಂದು ಗಣೇಶೋತ್ಸವ ಆಚರಣೆ ಕುರಿತು ಹಾಗೂ ಈದ್ ಮೀಲಾದ್ ಆಚರಣೆ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಲಾದ ಶಾಂತಿ ಸಮಿತಿಯ ಸದಸ್ಯರ ಹಾಗೂ ಗಣೇಶೋತ್ಸವ ಮಂಡಳಿಯ ಸದಸ್ಯರ ಮತ್ತು ಈದ್ ಮೀಲಾದ್ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಹಬ್ಬಗಳಲ್ಲಿ ಪ್ರೀತಿ ಸಡಗರ ಬಾಂಧವ್ಯಗಳು ಒಂದುಗೂಡಿ ಸಂಭ್ರಮದ ವಾತಾವರಣ ನಿರ್ಮಾಣವಾಗಬೇಕೆಂದರು. ಇಂತಹ ಮಹತ್ವದ ಹಬ್ಬಗಳನ್ನು ನೋಡಲು ಅವುಗಳ ಆಚರಣೆ ಕುರಿತು ಅರಿತುಕೊಳ್ಳಲು ಸುಶಿಕ್ಷಿತ ಹಾಗೂ ವಿದ್ಯಾವಂತ ಜನತೆ ಆಗಮಿಸುತ್ತಿರುವದು ವಿಶೇಷ. ಅಂತಹ ಸಮಯದಲ್ಲಿ ಯಾವುದೇ ತರಹದ ಉದ್ದಟತನದಘಟನೆಗಳುಜರುಗಿದರೆಒಳ್ಳೆಯ ವಿದ್ಯಾವಂತರೂ ಸಹ ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎಂದರು. ಗಣೇಶೋತ್ಸವ ಮಂಡಳಿಯವರಿಗೆ ಭರಣಾ ಮಾಡಿಕೊಡಲು ಫಾರ್ಮ ನೀಡಲಾಗುತ್ತದೆ. ಅದನ್ನು ಭರಣಾ ಮಾಡಿಕೊಡಿ. ಅದರಲ್ಲಿ ತಾವು ನೀಡಿದ ಮಾರ್ಗಸೂಚಿಯಂತೆ ಆಚರಣೆ ಕಾರ್ಯಕ್ಕೆ ಮುಂದಾಗಬೇಕು. ಅದರಲ್ಲಿ ಯಾವುದೇ ಬದಲಾವಣೆ ಆಗಬಾರದೆಂದು ಹೇಳಿದ ಅವರು ಯಾರು ಕಾನೂನನ್ನು ಗೌರವಿಸುತ್ತಾರೆಯೊ ಅವರನ್ನು ನಾವು ಗೌರವಿಸುತ್ತೇವೆಂದರು.

ಇನ್ನೋರ್ವ ಪಿಎಸ್‌ಐ ರಾಮನಗೌಡ ಸಂಕನಾಳ ಮಾತನಾಡಿ, ಗಣೇಶೋತ್ಸವ ಮಂಡಳಿಯವರುಪ್ರತಿಷ್ಠಾಪನಾಸ್ಥಳಗಳನ್ನು ನಮೂದಿಸಿ ಜನತೆಗೆ ಹೋಗಿ ಬರಲು ಅಡೆತಡೆಯಾಗದಂತೆ ಹಾಗೂ ವಾಹನ ಸಂಚಾರಕ್ಕೂ ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ಆಯಾ ಪ್ರತಿಷ್ಠಾಪನಾ ಸ್ಥಳಕ್ಕೆ ಸಂಬಂದಿಸಿ ಸ್ವಯಂ ಸೇವಕರನ್ನು ನೇಮಿಸಬೇಕು. ೫ ದಿನಗಳು ಹಾಗೂ ೭ ದಿನಗಳು ಮತ್ತು ೯ ದಿನಗಳವರೆಗೆ ಪ್ರತಿಷ್ಠಾಪಿಸುವಂತಹ ಸಂಬಂದಿತ ಮಂಡಳಿಯವರು ವ್ಯವಸ್ಥಿತವಾಗಿ ಮಾಹಿತಿ ನೀಡಿಆದಿನಗಳತಕ್ಕಂತೆಕಾರ್ಯಕ್ರಮಗಳನ್ನು ಏರ್ಪಡಿಸಿ ಮಾದರಿಯ ಕಾರ್ಯಕ್ರಮವಾಗಿ ನಿರ್ಮಾಣವಾಗುವಂತೆಮಾಡಬೇಕೆಂದರು. ಡಿಜೆ ಇನ್ನಿತರ ಕೆಲವು ಅರ್ಥವಿಲ್ಲದ ಕಾರ್ಯಗಳಿಗೆ ಖರ್ಚು ಮಾಡದೇ ಪ್ರಕೃತಿ ಅನುಗುಣವಾಗಿ ಮಣ್ಣಿನ ಗಣಪತಿಗಳನ್ನು ಕೂಡ್ರಿಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸುವಂತಹ, ಪ್ರಶಸ್ತಿ ಪತ್ರ ನೀಡುವಂತಹ ಕಾರ್ಯ ಮಾಡಿ ಎಂದು ವಿವಿಧ ರೀತಿಯ ಸಲಹೆ ನೀಡಿದ ಅಧಿಕಾರಿಗಳು ಈ ಹಿಂದಿನಂತೆ ಎಲ್ಲ ಗಜಾನನ ಮಂಡಳಿಯವರು ಸಹಕಾರದ ಮನೋಭಾವನೆಯಿಂದ ನಡೆದುಕೊಂಡು ಒಂದು ಒಳ್ಳೆಯ ಮಾದರಿಯ ಆಚರಣೆಯನ್ನು ತಾವು ಮಾಡಿದಲ್ಲಿ ಆಯಾ ಸಂಭಂದಿತ ಬಡಾವಣೆಯ ಗಜಾನನ ಮಂಡಳಿಯವರಿಗೆ ನಾನೇ ಸ್ವತಃ ಸನ್ಮಾನಿಸಿ ಗೌರವಿಸುತ್ತೇನೆಂದರು.

ಇನ್ನೋರ್ವ ಅಪರಾಧ ವಿಭಾಗ ಪಿಎಸ್‌ಐ ಆರ್.ಎಸ್.ಭಂಗಿಅವರುಮಾತನಾಡಿಗಣೇಶ ಹಬ್ಬ ಆಚರಿಸುವ ಸಮಯದಲ್ಲಿ ಆಯಾ ಬಡಾವಣೆಗಳ ಮಂಡಳಿಯವರು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದು ಸರ್ಕಾರದಿಂದ ತಮಗೆ ಆಗಮಿಸಿದ ನಿಯಮಗಳನ್ನು ಸಮಿತಿಯವರು ಕೈಗೊಳ್ಳ ಬೇಕಾದಂತವುಗಳನ್ನು ಓದಿ ಹೇಳಿದರು. ಪರವಾನಿಗೆಯೊಂದಿಗೆ ವಿದ್ಯುತ್ ಸರಬರಾಜು ಮಾಡಿಕೊಳ್ಳಬೇಕು.

ಡಿಜೆಗಳನ್ನು ನಿಷೇದಿಸಲಾಗಿದೆ. ವಿಸರ್ಜನೆ ಸಮಯದಲ್ಲಿ ಯಾವುದೇ ತಂಟೆ ತಕರಾರುಗಳುಬರದಂತೆನೋಡಿಕೊಳ್ಳಬೇಕು ಎಂದು ಸರ್ಕಾರ ಹೊರಡಿಸಿದ ನಿಯಮಗಳ ಕುರಿತು ಓದಿ ಹೇಳಿದ ಅವರು ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೧೦ ಗಂಟೆಯವರೆಗೆ ವಿಸರ್ಜನೆ ಕಾರ್ಯ ಮುಗಿಸಬೇಕೆಂದು ನಿರ್ಧರಿಸಿದ್ದನ್ನುಉಪಸ್ಥಿತ ಸಮಿತಿಯವರಿಗೆ ತಿಳಿಸಿದರು.

ಪುರಸಭೆ ಸಿಬ್ಬಂದಿಯವರು ಹಾಗೂ ಹೆಸ್ಕಾಂ ಸಂಬಂದಿತ ಸಿಬ್ಬಂದಿಯವರು ಮಾತನಾಡಿ ಈ ಹಿಂದಿನಿಂದ ಕೈಕೊಂಡು ಬರಲಾಗುತ್ತಿರುವ ಕಾರ್ಯಗಳಂತೆ ಇನ್ನು ಮುಂದೆಯೂ ಕೈಕೊಂಡು ಈ ಎರಡೂ ಹಬ್ಬಗಳ ಆಚರಣೆಗೆ ಅನುವು ಮಾಡಿ ಕೊಡಲಾಗುವುದೆಂದರು.

ಇದೇ ಸಮಯದಲ್ಲಿ ಗಣ್ಯರಾದ ಬಿ. ಎಸ್. ಪಾಟೀಲ (ಯಾಳಗಿ), ರಜಾಕ ಮನಗೂಳಿ, ಜೈಭೀಮ ಮುತ್ತಗಿ ಅವರು ಮಾತನಾಡಿ ತಾಳಿಕೋಟೆ ಪಟ್ಟಣವು ಶಾಂತಿ ಕಾಪಾಡತಕ್ಕಂತಹಪಟ್ಟಣವಾಗಿದೆ.ಈಹಿಂದೆ ಕಾರಣಾಂತರದಿಂದ ವ್ಯಾಪಾರ ವಹಿವಾಟಕ್ಕೆ ತೊಂದರೆಯಾಗಿತ್ತು. ಭಾರತೀಯ ಸಂಸ್ಕೃತಿಯ ಯಾವುದೇ ಹಬ್ಬವಾಗಿದ್ದರೂ ಅದಕ್ಕೆ ವಿಶೇಷ ಸಹಕಾರ ಕೊಡುವ ಕಾರ್ಯ ಮಾಡಬೇಕೆಂದರು. ಎಲ್ಲರೂ ಒಗ್ಗಟ್ಟಿನಿಂದ ಇದ್ದರೆ ಶಾಂತಿ ಎಂಬುದು ಇದ್ದೇ ಇರುತ್ತದೆ ಎಂದು ಈದ್ ಮೀಲಾದ್ ಹಬ್ಬ ಎಂಬುದು ಮುಸ್ಲಿಂರ ಹಬ್ಬಗಳಲ್ಲಿ ಮಹತ್ವದ ಹಬ್ಬ. ಇದು ಮಹ್ಮದ ಪೈಗಂಬರ ಅವರು ಹುಟ್ಟಿದ ಹಬ್ಬ. ಅವರ ಆದರ್ಶ ಪಾಲನೆ ಮಾಡುವಂತಹ ಹಬ್ಬವಾಗಿದೆ. ಕಾರಣ ಎಲ್ಲ ಹಬ್ಬಗಳನ್ನು ಈ ಹಿಂದಿನಿಂದ ಆಚರಿಸುತ್ತಾ ಬಂದಂತೆ ಇವುಗಳನ್ನು ಕೂಡ ಆಚರಿಸೋಣವೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಿದ್ದನಗೌಡ ಪಾಟೀಲ, ಪ್ರಭುಗೌಡ ಮದರಕಲ್ಲ, ಸಿಕಂದರ ವಠಾರ, ಕಾಶಿನಾಥ ಮುರಾಳ, ಕುಮಾರಗೌಡ ಪಾಟೀಲ, ಅಬುಬಕರ ಲಾಹೋರಿ, ನಿಂಗಪ್ಪ ಕುಂಟೋಜಿ, ಕೆ. ಯು. ಬಿಳವಾರ, ಎಂ. ಎಫ್. ರಂಗನಪೇಠ, ಎಸ್. ಎಂ. ಸಾರವಾಡ, ಎಂ. ಜಿ. ಪಾಟೀಲ, ಮಂಜು ಶೆಟ್ಟಿ, ರಜಾಕ ಮನಗೂಳಿ, ಯಲ್ಲೇಶ ದಾಯಪುಲೆ, ಡಿ. ವ್ಹಿ. ಪಾಟೀಲ, ಸಂಭಾಜಿ ವಾಡಕರ, ಎಂ. ಎಸ್. ಸರಶೆಟ್ಟಿ, ಆನಂದ ಹಜೇರಿ, ಮೊದಲಾದವರು ಉಪಸ್ಥಿತರಿದ್ದರು.

ಪೊಲೀಸ್ ಪೇದೆ ಸಿದ್ದನಗೌಡ ದೊಡಮನಿ ನಿರೂಪಿಸಿ ವಂದಿಸಿದರು.



ರಬಕವಿ-ಬನಹಟ್ಟಿ : ರಬಕವಿ ಶಿಕ್ಷಣ ಸಂಸ್ಥೆಯ ಎಂ. ವಿ. ಪಟ್ಟಣ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಸ್ಮಾರ್ಟ ಬೋರ್ಡಗೆ ಚಾಲನೆ ನೀಡಲಾಯಿತು. ಮುಂಬೈ ಮೂಲದ ಟಿ. ತುಳಸಿದಾಸ, ವೈಜದಾಸ ಚಾರಿಟೇಬಲ್ ಟ್ರಸ್ಟಿನ ಸಂಯೋಜಕ ವಿಶ್ವನಾಥ ಸಿಂದಗಿ, ಶಿಕ್ಷಣ ಸಂಸ್ಥೆಯ ನಿರ್ದೇಶಕ ಚಿದಾನಂದ ಸೊಲ್ಲಾಪುರ, ಮುಖ್ಯೋಪಾಧ್ಯಾಯರಾದ ಪ್ರತಾಪ ಪಿ. ಎಚ್. ಮತ್ತು ಬಿ. ಎ. ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳಿಗೆ ಕಡಿವಾಣ ಹಾಕಿ: ಸರಕಾರಕ್ಕೆ ವೆಲ್ಫೇರ್ ಪಾರ್ಟಿ ಅಗ್ರಹಾರ



**ಬೆಂಗಳೂರು:** ಇತ್ತೀಚೆಗೆಅತ್ಯಾಚಾರಪ್ರಕರಣಗಳುನಮ್ಮ ರಾಜ್ಯದಲ್ಲಿ ಹೆಚ್ಚಾಗುತ್ತಿವೆ. ಉತ್ತರದ ರಾಜ್ಯಗಳಲ್ಲಿ ಕೇಳಿ ಬರುತ್ತಿದ್ದ ಈ ರೋಗ ರಾಜ್ಯಕ್ಕೂ ವಕ್ಕರಿಸಿದೆ.ಸರಕಾರ ಈ ಬಗ್ಗೆ ಗಂಭೀರವಾದ ಕ್ರಮ ಜರುಗಿಸುತ್ತಾ ಈ ಅತ್ಯಾಚಾರ ಪ್ರಕಾರಣಗಳನ್ನು ತಡೆಗಟ್ಟಬೇಕು ಎಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯಾಧ್ಯಕ್ಷ ಅಡ್ವಕೇಟ್ ತಾಹೇರ್ ಹುಸೇನ್ ಸರಕಾರಕ್ಕೆ ಒತ್ತಾಸಿದ್ದಾರೆ.

ಉಡುಪಿ ಜಿಲ್ಲೆಯ ಕಾರ್ಕಳದಲ್ಲಿಯುವತಿಯ ಮೇಲಿನ ಅತ್ಯಾಚಾರ ಪ್ರಕರಣ, ಶಿವಮೊಗ್ಗದ ವಸತಿ ಶಾಲೆಯ ವಿಧ್ಯಾರ್ಥಿನಿಯಮೇಲೆನಡೆದಅತ್ಯಾಚಾರ,ಕಲಬುರ್ಗಿಯ ಜೇವರ್ಗಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ದೈಹಿಕ ಶಿಕ್ಷಕನಿಂದ ಲೈಂಗಿಕ ದೌರ್ಜನ್ಯ ಹೀಗೆ ವರದಿಗಳ ಪಟ್ಟಿಗಳು ಮುಂದುವರಿಯುತ್ತಾ ಸಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ 2013ರಿಂದ 2023ರವರೇಗಿನ ಅಂಕಿಅಂಶಗಳನ್ನುತೆಗೆದಾಗ 1322 ಅತ್ಯಾಚಾರ ಪ್ರಕರಣಗಳು ಕೇವಲ ಬೆಂಗಳೂರಿನಲ್ಲೇ ನಡೆದಿದೆ. ದಾಖಲಾದ ಈ ಪ್ರಕರಣಗಳಲ್ಲಿ ಕೇವಲ ಹತ್ತಕ್ಕೆ ಮಾತ್ರವೇ ದಂಡನೆಯಾಗಿದೆ. ಅತ್ಯಾಚಾರಿಗಳಿಗೆ ಕಾನೂನಿನ ಭಯ ಇಲ್ಲದಿರುವುದು ಈ ಪಿಡುಗು ವ್ಯಾಪಕವಾಗಲು ಕಾರಣವಾಗಿದೆ. ಹೆಣ್ಣು ಕುಟುಂಬದ ಕಣ್ಣು ಸಮಾಜದ ಬೆಳಕು,ತಾಯಿ,ದೇವತೆ ಎಂದೆಲ್ಲಾ ವರ್ಣಿಸುತ್ತೇವೆ. ಆದರೆ ಆಕೆ ಇಂದು ಒಂ-ಟಿಯಾಗಿ ಪ್ರಯಾಣಿಸುವಂತಿಲ್ಲ. ಆಕೆಯ ಹಕ್ಕುಗಳ ಹರಣವಾಗುತ್ತಿದೆ. ಮರ್ದಿತ ಮಹಿಳೆಯರಿಗೆ ಸರಿಯಾದ ನ್ಯಾಯ ದೊರಕುತ್ತಿಲ್ಲ.ಹೆಣ್ಣಿನ ವಿಚಾರದಲ್ಲಿ ಅಪಾಯಕಾರಿ ಸ್ಥಿತಿಗೆ ರಾಜ್ಯ ತಲುಪಿದೆ. ಪ್ರಧಾನ ಮಂತ್ರಿಗಳು ಅತ್ಯಾಚಾರದ ವಿರುದ್ಧ ವಿಶೇಷ ಕಾನೂನು ತರುವುದಾಗಿ ಹೇಳುತ್ತಿದ್ದಾರೆ. ಇಲ್ಲಿ ಕಾನೂನು ಕಾಯ್ದೆಗಳು ಧಾರಾಳವಾಗಿದೆ. ಅದು ಯಥಾವತ್ತಾಗಿ ಅನುಷ್ಠಾನಕ್ಕೆ ಬಂದರೆ ಅಪರಾಧಿಗಳು ಪಾರಾಗುವುದು ಅಸಾಧ್ಯ. ತಮ್ಮ ಆಪ್ತರ ಪ್ರತಿಷ್ಠಿತರ ಪ್ರಭಾವ ಬಳಸಿ ಪ್ರಕರಣವನ್ನು ತಿರುವುಗೊಳಿಸಲಾಗುತ್ತಿದೆ. ಹೀಗೆ ಸುಲಭವಾಗಿ ಶಿಕ್ಷೆಯಿಂದ ನುಣುಚಿಕೊಳ್ಳುತ್ತಾರೆ. ಆದ್ದರಿಂದ ಕಾನೂನನ್ನು ಸಮರ್ಪಕವಾಗಿ ಬಳಸಿ ಅಪರಾಧಿಗಳನ್ನುಮಟ್ಟಹಾಕಿದರೆ ಅತ್ಯಾಚಾರದಂತಹ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟಬಹುದು ಎಂದು ತಾಹೇರ್ ಹುಸೇನ್ ಅಭಿಪ್ರಾಯ ಪಟ್ಟಿದ್ದಾರೆ. ನ್ಯಾಯದ ವಿಳಂಬವೂ ಅಪರಾಧ ಪ್ರಕ್ರಿಯೆ ಹೆಚ್ಚಾಗಲು ಹಾಗೂ ಜನರಿಗೆ ನ್ಯಾಯದ ಬಗ್ಗೆ ಜಿಗುಪ್ಸೆ ಮೂಡಲು ಕಾರಣವಾಗುತ್ತದೆ. ತ್ವರಿತ ಗತಿಯಲ್ಲಿ ತನಿಖೆ ನಡೆಸಿ ಸಂತ್ರಸ್ತರಿಗೆ ಶೀಘ್ರವಾಗಿ ನ್ಯಾಯ ದೊರೆಯುವಂತೆ ಮಾಡಬೇಕು. ನ್ಯಾಯ ವಿಳಂಬ ಮಾಡಿ ಅಪರಾಧಿಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಲು ಅವಕಾಶ ಮಾಡಕೊಡಬಾರದು. ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ರಸಕ್ತ ಸಮಾಜಕ್ಕೆ ಇದರ ಅಗತ್ಯವಿದೆ ಎಂದು ಅವರು ಸರಕಾರವನ್ನು ಆಗ್ರಹಿಸಿದರು.

# ಬಡವರ ಸಾಮರ್ಥ್ಯ ಹೆಚ್ಚಿಸಲು ನಿರಾಣಿಯವರ ಪರಿಶ್ರಮ ದೊಡ್ಡದು

**ಬನಹಟ್ಟಿ :** ನಿರಂತರ ಬಡವರ ಪರ ಬೆನ್ನೆಲುಬಾಗಿ ನಿಂತು, ಅವರ ಸೇವೆ ಸಲ್ಲಿಸುತ್ತಿರುವ ಮಾಜಿ ಸಚಿವ, ನಿರಾಣಿ ಸಕ್ಕರೆ ಕಾರ್ಖಾನೆ ಮಾಲಿಕ ಮುರುಗೇಶ ನಿರಾಣಿಯವರ ಪರಿಶ್ರಮ ದೊಡ್ಡದು. ಇದೀಗ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಬಡಜನರ ಸೇವೆಗಾಗಿ ಮೀಸಲಿಟ್ಟಿರುವದು ವಿಶೇಷವೆಂದು ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಭೀಮಶಿ ಮಗದುಮ್ ಹೇಳಿದರು.

ಬನಹಟ್ಟಿಯ ಜನತಾ ಶಿಕ್ಷಣ ಸಂಘದ ಆವರಣದಲ್ಲಿ ನಿರಾಣಿಯವರ ಜನ್ಮ ದಿನದ ಅಂಗವಾಗಿ ನಡೆದ ಉಚಿತ ಆರೋಗ್ಯ ಹಾಗು ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರೋಗಗಳು ಬರುವ ಮುನ್ನ ಎಚ್ಚರವಹಿಸಿ ಆಸ್ಪತ್ರೆ ಮತ್ತು ಮಾತ್ರೆಗಳಿಂದ ದೂರವಿರಬಹುದೆಂದರು. ರೋಗದ ಲಕ್ಷಣ ಕಾಣುವ ಮುನ್ನವೇ ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡುವ ಸಲಹೆ ಪಾಲಿಸಬೇಕೆಂದರು.

ಜೆಎಸ್‌ಎಸ್ನ ಚೇರಮನ್ ಬಸವರಾಜ ಜಾಡಗೌಡ ಮಾತನಾಡಿ, ಆರೋಗ್ಯ ಶಿಬಿರಗಳಿಂದ ಬಡವರಿಗೆ ಸಾಕಷ್ಟು ಅನುಕೂಲವಾಗುತ್ತಿದೆ. ಇಂತಹ ಶಿಬಿರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸುತ್ತಿರುವ ಮುರುಗೇಶ ನಿರಾಣಿಯವರನ್ನು ಅವರು ಅಭಿನಂದಿಸಿದರು.

ಬಸವರಾಜ ಭದ್ರನ್ನವರ, ಮಲ್ಲಿಕಾರ್ಜುನ ಬಾಣಕಾರ, ಸುರೇಶ ಚಿಂಡಕ, ಸುರೇಶ ಕೋಲಾರ, ದುಂಡಪ್ಪ ಮಾಚಕನೂರ, ಶಂಕರ ಸೋರಗಾಂವಿ, ಗಂಗಾಧರ ಕೊಕಟನೂರ, ಗಿರೀಶ ಆನಿಖಿಂಡಿ, ಐ. ಜಿ. ನ್ಯಾಮಗೌಡ, ಓಂ ಕಾಬ್ರಾ, ಶಂಕರ ಜಾಲಿಗಿಡದ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State